# 2. ವಿಪತ್ತು ನಿರ್ವಹಣೆ ಕಾರ್ಯಕ್ರಮ

## ಪ್ರಸ್ತಾವನೆ

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಕಲ್ಪನೆಯ ಅಪೂರ್ವ ಕಾರ್ಯಕ್ರಮವಾದ 'ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಕಾರ್ಯಕ್ರಮ'ವು ಕರ್ನಾಟಕ ರಾಜ್ಯದಲ್ಲಿ ಪ್ರಾಕೃತಿಕ ವಿಕೋಪಗಳ ನಿರ್ವಹಣೆಯಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಮಾತೃಶ್ರೀ ಡಾ. ಹೇಮಾವತಿ ವಿ ಹೆಗ್ಗಡೆಯವರು ವಿಪತ್ತು ನಿರ್ವಹಣಾ ಸ್ವಯಂಸೇವಕರ ತಂಡಕ್ಕೆ "ಶೌರ್ಯ" ಎನ್ನುವ ಹೆಸರಿನಿಂದ ಗುರುತಿಸಿದ್ದು ಈ ಹೆಸರು ವ್ಯಾಪಕವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಜೂನ್ 21, 2020 ರಂದು ಆರಂಭಗೊಂಡ ಈ ಕಾರ್ಯಕ್ರಮ ಇದೀಗ ಮೂರು ವರ್ಷಗಳನ್ನು ಪೂರೈಸಿದೆ. ಪ್ರಾಕೃತಿಕವಾಗಿ ಸಂಭವಿಸುವ ವಿಪತ್ತುಗಳಿರಲಿ ಅಥವಾ ಮಾನವ ನಿರ್ಮಿತ ವಿಪತ್ತುಗಳೇ ಇರಲಿ ಯಾವುದೇ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ 'ಶೌರ್ಯ' ಸಮಿತಿಯ ಸ್ವಯಂಸೇವಕರು ತುರ್ತಾಗಿ ಧಾವಿಸಿ ಅಗತ್ಯ ನೆರವು ನೀಡುತ್ತಿದ್ದಾರೆ. ಆಪತ್ತಿನ ಸಮಯದಲ್ಲಿ ನೆರವಿಗೆ ಧಾವಿಸಲು ಅಗತ್ಯವಿರುವ ನೈಪುಣ್ಯತೆಯನ್ನು ತರಬೇತಿಗಳ ಮೂಲಕ ಯುವಕ, ಯುವತಿಯರಿಗೆ ನೀಡಿದ್ದು ಯಾವುದೇ ಸಮಯದಲ್ಲಿ ಸ್ವಯಂಸೇವಕರು ತುರ್ತು ಸ್ಪಂದನೆಗೆ ಧಾವಿಸುತ್ತಿದ್ದಾರೆ.

"ಶೌರ್ಯ" ವಿಪತ್ತು ನಿರ್ವಹಣಾ ಕಾರ್ಯಕ್ರಮದಲ್ಲಿ ತೊಡಗಿಕೊಂಡ ಸ್ವಯಂಸೇವಕರು ಪೊಲೀಸ್ ಠಾಣೆಗಳು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ಆರೋಗ್ಯ ಕೇಂದ್ರಗಳು, ಜಿಲ್ಲಾಡಳಿತ, ತಾಲ್ಲೂಕು ಆಡಳಿತ, ಜನಪ್ರತಿನಿಧಿಗಳು, ಮುಖಂಡರು, ಸಂಘ ಸಂಸ್ಥೆಗಳು ಹಾಗೂ ವಿವಿಧ ಅಧಿಕಾರಿಗಳ ಪರಿಚಯ ಹೊಂದಿದ್ದು ಸಕಾಲದಲ್ಲಿ ಇಲಾಖೆಗಳ ನೆರವು ಪಡೆದು ವಿಪತ್ತಿನ ಸ್ಪಂದನೆ ನೀಡುತ್ತಿದ್ದಾರೆ. ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್ (ರಾಷ್ಟ್ರೀಯ ತುರ್ತು ಸ್ಪಂದನೆ ಪಡೆ) ರಾಜ್ಯ ಸರ್ಕಾರದ ಎಸ್.ಡಿ.ಆರ್.ಎಫ್ (ರಾಜ್ಯ ತುರ್ತು ಸ್ಪಂದನೆ ಪಡೆ) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಗ್ರಹರಕ್ಷಕದಳ, ವಿವಿಧ ಸಂಘ ಸಂಸ್ಥೆಗಳಿಂದ ವೈಜ್ಞಾನಿಕ ತರಬೇತಿಯನ್ನು ಪಡೆದಿರುವ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡ ಆಪತ್ತುಗಳ ನಿರ್ವಹಣೆಗೆ ಸರ್ಕಾರದ ವ್ಯವಸ್ಥೆಯೊಂದಿಗೆ ಯಶಸ್ವಿಯಾಗಿ ತೊಡಗಿಕೊಂಡಿದೆ.

## 2.1. ಕಾರ್ಯಕ್ರಮ ಅನುಷ್ಠಾನದ ತಾಲ್ಲೂಕುಗಳು

ಶೌರ್ಯ ವಿಪತ್ತು ನಿರ್ವಹಣಾ ಕಾರ್ಯಕ್ರಮವು ಕರ್ನಾಟಕ ರಾಜ್ಯದ 18 ಜಿಲ್ಲೆಯ 72ತಾಲ್ಲೂಕುಗಳಲ್ಲಿ ಅನುಷ್ಠಾನಗೊಂಡಿದೆ. ಗ್ರಾಮಗಳಲ್ಲಿ ಸಮಾಜಪರ ಕಾಳಜಿ ಹೊಂದಿರುವ ಯುವಕ, ಯುವತಿಯರನ್ನು ಸ್ವಯಂಸೇವಕರನ್ನಾಗಿ ಆಯ್ಕೆ ಮಾಡಿ ಅವರನ್ನು ಎನ್.ಡಿ.ಆರ್.ಎಫ್ ಮತ್ತು ಅಗ್ನಿಶಾಮಕ ದಳದ ಮುಖೇನ ತರಬೇತುಗೊಳಿಸುವುದರ ಮೂಲಕ ಸೇರ್ಪಡೆಗೊಳಿಸಲಾಗಿದೆ. ತಾಲೂಕು ಸಮಿತಿಗಳಿಗೆ 100 ರಿಂದ 200 ಸ್ವಯಂಸೇವಕರನ್ನು ನೋಂದಾವಣಿ ಮಾಡಲಾಗುತ್ತಿದ್ದು ಸದಸ್ಯರು ಸಾಮಾಜಿಕ ಹಾಗೂ ವಿಪತ್ತು ಸೇವೆಯಲ್ಲಿ ತನ್ನನ್ನು ತಾವು ತೊಡಗಿಸಿಕೊಳ್ಳುತ್ತಿದ್ದಾರೆ.

ಪ್ರಸ್ತುತ ರಾಜ್ಯದ 72 ತಾಲ್ಲೂಕುಗಳಲ್ಲಿ 6592 ಸ್ವಯಂಸೇವಕರು ವಿಪತ್ತು ನಿರ್ವಹಣಾ ಸಮಿತಿಗೆ ಆಯ್ಕೆಯಾಗಿರುತ್ತಾರೆ. ತಾಲೂಕುವಾರು ಸಮಿತಿ ಆರಂಭಗೊಂಡ ವಿವರ, ಆಯ್ಕೆಮಾಡಲಾದ ಸದಸ್ಯರು ಹಾಗೂ ಅವರಿಗೆ ನೀಡಲಾದ ತರಬೇತಿಯ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಜಿಲ್ಲೆ | ತಾಲೂಕು | ಕಾರ್ಯಕ್ರಮ ಉದ್ಘಾಟನೆ ದಿನಾಂಕ | ಭಾಗವಹಿಸಿದ ಸ್ವಯಂ ಸೇವಕರ ಸಂಖ್ಯೆ | ತರಬೇತಿ ನೀಡಿದ ಸಂಸ್ಥೆ |
|---|---|---|---|---|---|
| 1 | ದ.ಕ 1 | ಬೆಳ್ತಂಗಡಿ | 21.06.2020 | 170 | ಎನ್.ಡಿ.ಆರ್.ಎಫ್ |
| 2 | | ಗುರುವಾಯನಕೆರೆ | 21.06.2020 | 153 | ಎನ್.ಡಿ.ಆರ್.ಎಫ್ |
| 3 | | ಮಂಗಳೂರು | 25.08.2022 | 150 | ಅಗ್ನಿಶಾಮಕ ದಳ |
| 4 | ದ.ಕ 2 | ವಿಟ್ಲ | 30.09.2022 | 165 | ಅಗ್ನಿಶಾಮಕ ದಳ |
| 5 | | ಪುತ್ತೂರು | 28.09.2022 | 175 | ಅಗ್ನಿಶಾಮಕ ದಳ |
| 6 | | ಕಡಬ | 22.10.2022 | 134 | ಅಗ್ನಿಶಾಮಕ ದಳ |
| 7 | | ಸುಳ್ಯ | 05.10.2020 | 123 | ಎನ್.ಡಿ.ಆರ್.ಎಫ್ |
| 8 | | ಕಾಸರಗೋಡು ಕುಂಬಳೆ | 10.12.2022 | 141 | ಅಗ್ನಿಶಾಮಕ ದಳ |
| 9 | ಚಿಕ್ಕಮಗಳೂರು | ಚಿಕ್ಕಮಗಳೂರು | 07.01.2021 | 123 | ಎನ್.ಡಿ.ಆರ್.ಎಫ್ |
| 10 | | ಕೊಪ್ಪ | 09.01.2021 | 70 | ಎನ್.ಡಿ.ಆರ್.ಎಫ್ |
| 11 | | ಮೂಡಿಗೆರೆ | 08.01.2021 | 128 | ಎನ್.ಡಿ.ಆರ್.ಎಫ್ |
| 12 | | ಕಳಸ | 08.01.2021 | 51 | ಎನ್.ಡಿ.ಆರ್.ಎಫ್ |
| 13 | | ಶೃಂಗೇರಿ | 09.01.2021 | 82 | ಎನ್.ಡಿ.ಆರ್.ಎಫ್ |
| 14 | | ಎನ್.ಆರ್ ಪುರ | 09.01.2021 | 54 | ಎನ್.ಡಿ.ಆರ್.ಎಫ್ |
| 15 | ಉಡುಪಿ | ಉಡುಪಿ | 06.12.2021 | 100 | ಅಗ್ನಿಶಾಮಕ ದಳ |
| 16 | | ಕಾಪು | 06.12.2021 | 52 | ಅಗ್ನಿಶಾಮಕ ದಳ |
| 17 | | ಹೆಬ್ರಿ | 06.12.2021 | 38 | ಅಗ್ನಿಶಾಮಕ ದಳ |
| 18 | | ಬ್ರಹ್ಮಾವರ | 24.08.2022 | 84 | ಅಗ್ನಿಶಾಮಕ ದಳ |
| 19 | | ಕುಂದಾಪುರ 1 | 07.12.2021 | 66 | ಅಗ್ನಿಶಾಮಕ ದಳ |
| 20 | | ಕುಂದಾಪುರ 2 | 07.12.2021 | 57 | ಅಗ್ನಿಶಾಮಕ ದಳ |
| 21 | | ಬೈಂದೂರು | 26.12.2022 | 128 | ಅಗ್ನಿಶಾಮಕ ದಳ |
| 22 | ಉತ್ತರ ಕನ್ನಡ 1 | ಕುಮಟಾ | 26.09.2020 | 133 | ಎನ್.ಡಿ.ಆರ್.ಎಫ್ |
| 23 | | ಹೊನ್ನಾವರ | 01.02.2021 | 66 | ಎನ್.ಡಿ.ಆರ್.ಎಫ್ |
| 24 | | ಭಟ್ಕಳ | 10.02.2021 | 40 | ಎನ್.ಡಿ.ಆರ್.ಎಫ್ |
| 25 | | ಅಂಕೋಲಾ | 28.09.2020 | 50 | ಎನ್.ಡಿ.ಆರ್.ಎಫ್ |
| 26 | | ಕಾರವಾರ | 28.09.2020 | 35 | ಎನ್.ಡಿ.ಆರ್.ಎಫ್ |
| 27 | ಶಿರಸಿ | ಶಿರಸಿ | 16.08.2022 | 150 | ಅಗ್ನಿಶಾಮಕ ದಳ |
| 28 | | ಸಿದ್ಧಾಪುರ | 27.07.2022 | 100 | ಅಗ್ನಿಶಾಮಕ ದಳ |
| 29 | | ಯಲ್ಲಾಪುರ | 12.01.2022 | 54 | ಅಗ್ನಿಶಾಮಕ ದಳ |
| 30 | | ಮುಂಡಗೋಡ | 12.01.2022 | 50 | ಅಗ್ನಿಶಾಮಕ ದಳ |
| 31 | ಕೊಡಗು | ಸೋಮವಾರಪೇಟೆ | 05.01.2021 | 89 | ಎನ್.ಡಿ.ಆರ್.ಎಫ್ |
| 32 | | ಕುಶಾಲನಗರ | 05.01.2021 | 40 | ಎನ್.ಡಿ.ಆರ್.ಎಫ್ |
| 33 | | ವಿರಾಜಪೇಟೆ | 04.01.2021 | 60 | ಎನ್.ಡಿ.ಆರ್.ಎಫ್ |
| 34 | | ಮಡಿಕೇರಿ | 04.01.2021 | 35 | ಎನ್.ಡಿ.ಆರ್.ಎಫ್ |
| 35 | | ಪೊನ್ನಂಪೇಟೆ | 04.01.2021 | 23 | ಎನ್.ಡಿ.ಆರ್.ಎಫ್ |

| | | | | | |
|---|---|---|---|---|---|
| 36 | ಶಿವಮೊಗ್ಗ | ತೀರ್ಥಹಳ್ಳಿ | 29.12.2022 | 130 | ಅಗ್ನಿಶಾಮಕ ದಳ |
| 37 | ಹಾಸನ | ಸಕಲೇಶಪುರ | 06.01.2021 | 105 | ಎನ್.ಡಿ.ಆರ್.ಎಫ್ |
| 38 | | ಹಾಸನ | 30.11.2021 | 70 | ಅಗ್ನಿಶಾಮಕ ದಳ |
| 39 | | ಬೇಲೂರು | 22.06.2022 | 105 | ಅಗ್ನಿಶಾಮಕ ದಳ |
| 40 | | ಆಲೂರು | 06.01.2021 | 30 | ಎನ್.ಡಿ.ಆರ್.ಎಫ್ |
| 41 | | ಶಾಂತಿಗ್ರಾಮ | 05.01.2021 | 27 | ಅಗ್ನಿಶಾಮಕ ದಳ |
| 42 | ಚಿಕ್ಕೋಡಿ | ಚಿಕ್ಕೋಡಿ | 13.08.2020 | 103 | ಎನ್.ಡಿ.ಆರ್.ಎಫ್ |
| 43 | | ನಿಪ್ಪಾಣಿ | 12.08.2020 | 62 | ಎನ್.ಡಿ.ಆರ್.ಎಫ್ |
| 44 | | ಹುಕ್ಕೇರಿ | 22.09.2022 | 155 | ಅಗ್ನಿಶಾಮಕ ದಳ |
| 45 | | ಸಂಕೇಶ್ವರ(ಹುಕ್ಕೇರಿ-2) | 22.09.2022 | 163 | ಅಗ್ನಿಶಾಮಕ ದಳ |
| 46 | | ರಾಯಭಾಗ್ | 26.09.2022 | 155 | ಅಗ್ನಿಶಾಮಕ ದಳ |
| 47 | ಬೆಳಗಾವಿ-2 | ಗೋಕಾಕ್ | 15.09.2022 | 110 | ಎನ್.ಡಿ.ಆರ್.ಎಫ್ |
| 48 | | ರಾಮದುರ್ಗ | 10.01.2022 | 149 | ಅಗ್ನಿಶಾಮಕ ದಳ |
| 49 | ಧಾರವಾಡ | ಧಾರವಾಡ | 09.09.2022 | 111 | ಎನ್.ಡಿ.ಆರ್.ಎಫ್ |
| 50 | | ಧಾರವಾಡ ಗ್ರಾಮಾಂತರ | 09.09.2022 | 68 | ಎನ್.ಡಿ.ಆರ್.ಎಫ್ |
| 51 | | ದಾಂಡೇಲಿ | 18.08.2022 | 50 | ಅಗ್ನಿಶಾಮಕ ದಳ |
| 52 | | ಹಳಿಯಾಳ | 18.08.2022 | 127 | ಅಗ್ನಿಶಾಮಕ ದಳ |
| 53 | ಅಥಣಿ | ಅಥಣಿ | 14.08.2020 | 100 | ಎನ್.ಡಿ.ಆರ್.ಎಫ್ |
| 54 | | ಕಾಗವಾಡ | 14.08.2020 | 86 | ಎನ್.ಡಿ.ಆರ್.ಎಫ್ |
| 55 | ಬಾಗಲಕೋಟೆ | ಮುಧೋಳ | 06.08.2021 | 190 | ಎನ್.ಡಿ.ಆರ್.ಎಫ್ |
| 56 | | ಬಾಗಲಕೋಟೆ | 09.08.2021 | 52 | ಎನ್.ಡಿ.ಆರ್.ಎಫ್ |
| 57 | | ಬಾದಾಮಿ | 10.08.2021 | 130 | ಎನ್.ಡಿ.ಆರ್.ಎಫ್ |
| 58 | | ಬನಹಟ್ಟಿ | 07.08.2021 | 20 | ಎನ್.ಡಿ.ಆರ್.ಎಫ್ |
| 59 | | ರಬಕವಿ | 07.08.2021 | 25 | ಎನ್.ಡಿ.ಆರ್.ಎಫ್ |
| 60 | | ಜಮಖಂಡಿ | 07.08.2021 | 155 | ಎನ್.ಡಿ.ಆರ್.ಎಫ್ |
| 61 | | ಬೀಳಗಿ | 09.08.2021 | 44 | ಎನ್.ಡಿ.ಆರ್.ಎಫ್ |
| 62 | ಗದಗ | ಕುಂದಗೋಳ | 07.09.2022 | 120 | ಅಗ್ನಿಶಾಮಕ ದಳ |
| 63 | | ನವಲಗುಂದ | 08.09.2022 | 140 | ಎನ್.ಡಿ.ಆರ್.ಎಫ್ |
| 64 | ರಾಯಚೂರು | ರಾಯಚೂರು | 23.01.2023 | 168 | ಅಗ್ನಿಶಾಮಕ ದಳ |
| 65 | ಬೆಂಗಳೂರು ಗ್ರಾ | ದೊಡ್ಡಬಳ್ಳಾಪುರ | 12.11.2022 | 40 | ಅಗ್ನಿಶಾಮಕ ದಳ |
| 66 | | ನೆಲಮಂಗಲ | 17.12.2021 | 32 | ಅಗ್ನಿಶಾಮಕ ದಳ |
| 67 | | ದೇವನಹಳ್ಳಿ | 12.11.2022 | 70 | ಅಗ್ನಿಶಾಮಕ ದಳ |
| 68 | | ಹೊಸಕೋಟೆ | 12.11.02022 | 74 | ಅಗ್ನಿಶಾಮಕ ದಳ |
| 69 | | ಆನೇಕಲ್ | 17.12.2021 | 34 | ಅಗ್ನಿಶಾಮಕ ದಳ |
| 70 | ಕಲ್ಬುರ್ಗಿ | ಅಫ್ಜಲ್‌ಪುರ | 25.01.2023 | 95 | ಅಗ್ನಿಶಾಮಕ ದಳ |
| 71 | | ಸೇಡಂ | 24.01.2023 | 117 | ಅಗ್ನಿಶಾಮಕ ದಳ |
| 72 | | ಚಿಂಚೋಳಿ | 26.01.2023 | 72 | ಅಗ್ನಿಶಾಮಕ ದಳ |
| **ಒಟ್ಟು ಸ್ವಯಂಸೇವಕರು** | | | | **6592** | |

## 2.2 ಸಂಯೋಜಕರ ಸಭೆ ಮತ್ತು ತರಬೇತಿಗಳು

ವಿಪತ್ತು ನಿರ್ವಹಣೆ ಕಾರ್ಯಕ್ರಮದ ಯಶಸ್ವೀ ಅನುಷ್ಠಾನಕ್ಕಾಗಿ ಯೋಜನೆಯ ಸೇವಾಪ್ರತಿನಿಧಿಗಳನ್ನು ಸಂಯೋಜಕರಾಗಿ ಆಯ್ಕೆ ಮಾಡಲಾಗಿದೆ. ಇವರು ಬಹಳ ಪರಿಣಾಮಕಾರಿಯಾಗಿ ಘಟಕಗಳ ನಿರ್ವಹಣೆ ಮಾಡುತ್ತಿದ್ದಾರೆ. ಘಟಕಗಳ ಸುಸ್ಥಿರ ಸಂಘಟನೆಗಾಗಿ ಸ್ವಯಂಸೇವಕರ ಪೈಕಿ ಓರ್ವರನ್ನು ಘಟಕ ಪ್ರತಿನಿಧಿಯನ್ನಾಗಿ ಆಯ್ಕೆ ಮಾಡಲಾಗಿದೆ. ತಾಲೂಕು ಸಮಿತಿ ರಚಿಸುವ ಮೊದಲು ಸಂಯೋಜಕರ ಆಯ್ಕೆ ಪ್ರಕ್ರಿಯೆ ನಡೆ-ಯುತ್ತದೆ. ವಲಯದ ಓರ್ವ ಸೇವಾಪ್ರತಿನಿಧಿಯನ್ನು ಸಂಯೋಜಕರನ್ನಾಗಿ ಮತ್ತು ಘಟಕಗಳಿಗೆ ಆಯ್ಕೆಯಾದ ಸ್ವಯಂಸೇವಕರ ಪೈಕಿ ಓರ್ವರನ್ನು ಘಟಕಪ್ರತಿನಿಧಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗುತ್ತದೆ. ಪ್ರಸ್ತುತ ಒಟ್ಟು 285 ಘಟಕ ಪ್ರತಿನಿಧಿಗಳು, ಹಾಗೂ 285 ಸಂಯೋಜ-ಕರು ಸೇವೆ ಸಲ್ಲಿಸುತ್ತಿದ್ದಾರೆ.

ಘಟಕಗಳು ಚಟುವಟಿಕೆಗಳಲ್ಲಿ ಹಿಂದೆ ಬಿದ್ದಾಗ ಸಂಯೋಜಕರು ಹಾಗೂ ಘಟಕಪ್ರತಿನಿಧಿಯನ್ನು ಒಟ್ಟು ಸೇರಿಸಿ ಚರ್ಚಿಸಲಾಗುತ್ತಿದೆ. ಇವರಿಗೆ ಸಂದರ್ಭಕ್ಕನುಗುಣವಾಗಿ ಅವರ ಬೇಡಿಕೆಯಂತೆಯೇ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದುವರೆಗೆ ಒಟ್ಟು 183 ಕೌಶಲ್ಯಾಧಾರಿತ ತರಬೇತಿಗಳನ್ನು ನಡೆಸಲಾಗಿದೆ. ಸಂಯೋಜಕರ ರಾಜ್ಯಮಟ್ಟದ 2 ವಾಟ್ಸಾಪ್ ಗುಂಪುಗಳನ್ನು ಮಾಡಲಾಗಿದ್ದು, ಸಂಯೋಜಕರು ಮುಕ್ತವಾಗಿ ಅವರ ಅಭಿಪ್ರಾಯ, ಸಂಶಯಗಳನ್ನು ಈ ತಂಡದಲ್ಲಿ ವಿಚಾರ ವಿನಿಮಯ ಮಾಡಿಕೊಂಡು ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಘಟಕವಾರು ಸಭೆ ನಡೆಸುವ ಕುರಿತು, ಶ್ರಮದಾನ ಹಾಗೂ ಸೇವೆಯ ಚಟುವಟಿಕೆಗಳ ಕುರಿತು, ಸುತ್ತೋಲೆಗಳ ಮಾಹಿತಿಯ ಕುರಿತು ಈ ಗುಂಪಿನಲ್ಲಿ ಸಂಯೋಜ-ಕರಿಗೆ ತಿಳುವಳಿಕೆ ನೀಡಲಾಗುತ್ತಿದೆ. ಅಲ್ಲದೆ ಮಳೆಗಾಲ ಸಂದರ್ಭದಲ್ಲಿ ಮಾಡಬೇಕಾದ ಕೆಲಸ ಕಾರ್ಯಗಳು, ಘಟಕದ ಮಾಸಿಕ ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳನ್ನೂ ಅವರ ಅಪೇಕ್ಷೆಯಂತೆ ಗುಂಪಿನಲ್ಲಿ ಚರ್ಚಿಸಲಾಗುತ್ತಿದೆ.






### ಸಮಾಲೋಚನೆ ಸಭೆಗಳು

ವಿಪತ್ತು ನಿರ್ವಹಣೆಯ ತಾಲ್ಲೂಕು ಸಮಿತಿಗಳಿಗೆ ವಿಪತ್ತು ನಿರ್ವಹಣೆಯ ಕೌಶಲ್ಯ ಹೊಂದಿರುವ, ಸಾಮಾಜಿಕ ಕಳಕಳಿ ಹೊಂದಿರುವ ಸ್ವಯಂಸೇವಕರನ್ನು ಆಯ್ಕೆ ಮಾಡುವ ಕುರಿತಂತೆ ಸಮಾಲೋಚನೆ ಸಭೆಗಳನ್ನು ಆಯೋಜನೆ ಮಾಡಲಾಗುತ್ತಿದೆ. 21 ರಿಂದ 45 ವರ್ಷ ವಯಸ್ಸಿನ, ಸಾಮಾಜಿಕ ಸೇವೆಯಲ್ಲಿ ಆಸಕ್ತಿ ಹೊಂದಿರುವವರನ್ನು ಗುರುತಿಸಿ ಸಭೆಗೆ ಆಹ್ವಾನಿಸಿದ್ದು ಇವರಿಗೆ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಆಶಯಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಸ್ವಯಂಪ್ರೇರಣೆಯಿಂದ ಸೇರ್ಪಡೆಗೊಳ್ಳಲು ಇಚ್ಛಿಸಿದವರನ್ನು ವಿಪತ್ತು ನಿರ್ವಹಣಾ ಘಟಕಕ್ಕೆ ಆಯ್ಕೆ ಮಾಡಲಾಗಿದೆ. ಈಜು ತಜ್ಞರು, ಉರಗ ಪ್ರೇಮಿಗಳು, ಮರ ಏರುವ ತಜ್ಞರು, ಇಲೆಕ್ಟ್ರಿಶಿಯನ್, ಗಾರೆ ಕೆಲಸದವರು, ವಾಹನ ಚಾಲಕರು, ಕೃಷಿಕರು ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಜ್ಞತೆ ಹೊಂದಿರುವವರನ್ನು ಸ್ವಯಂಸೇವಕರನ್ನಾಗಿ ಗುರುತಿಸಲಾಗಿದೆ. ರಾಜ್ಯದಲ್ಲಿ ಇದುವರೆಗೆ 1309 ಸಮಾಲೋಚನೆ ಸಭೆಗಳನ್ನು ನಡೆಸಲಾಗಿದೆ. ಹದಿನಾರು ಸಾವಿರಕ್ಕೂ ಅಧಿಕ ಮಂದಿ ಸಮಾಲೋಚನೆ ಸಭೆಯಲ್ಲಿ ಭಾಗವಹಿಸಿ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆ.

### ಸ್ವಯಂಸೇವಕರ ತರಬೇತಿ

ವಿಪತ್ತು ನಿರ್ವಹಣೆಯ ತಾಲ್ಲೂಕು ಸಮಿತಿಗೆ ನೋಂದಾವಣಿ ಮಾಡಿಕೊಂಡ ಸ್ವಯಂಸೇವಕರಿಗೆ ವಿಪತ್ತು ನಿರ್ವಹಣೆಯ ಬಗ್ಗೆ ಕೌಶಲ್ಯದ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆ (ಎನ್.ಡಿ.ಆರ್.ಎಫ್), ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ಪ್ರಾಯೋಗಿಕ ತರಬೇತಿ ನೀಡಲಾಗಿದೆ. ಪೊಲೀಸ್ ಇಲಾಖೆ, ರಾಜ್ಯ ವಿಪತ್ತು ನಿರ್ವಹಣಾ ಪಡೆ, ಗೃಹರಕ್ಷಕದಳ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಕೃಷಿ, ಪಶುಸಂಗೋಪನೆ, ಮೀನುಗಾರಿಕೆ ಮುಂತಾದ ಇಲಾಖೆಗಳ ಸಹಯೋಗದಲ್ಲಿ ಎರಡು ಹಂತಗಳಲ್ಲಿ ತರಬೇತಿಯನ್ನು

ನಡೆಸಲಾಗಿದೆ. ರಕ್ಷಣಾ ಪರಿಕರಗಳ ಬಳಕೆ ಮತ್ತು ನಿರ್ವಹಣೆಯ ಕುರಿತಾಗಿ ಚೆನ್ನೈ ಮೂಲದ ಉಷಾ ಫೈರ್ ಸೇಫ್ಟಿ ಕಂಪನಿಯಿಂದ ವಿಶೇಷ ತರಬೇತಿಯನ್ನು ನೀಡಲಾಗಿದೆ. ಇದುವರೆಗೆ 74 ತರಬೇತಿಗಳನ್ನು ಆಯೋಜನೆ ಮಾಡಲಾಗಿರುತ್ತದೆ.




## 2.3 ರಕ್ಷಣಾ ಪರಿಕರಗಳ ಒದಗಣೆ

ವಿಪತ್ತು ನಿರ್ವಹಣಾ ಸಮಿತಿಗಳಿಗೆ ವಿಪತ್ತು ನಿರ್ವಹಣಾ ಕಾರ್ಯಾಚರಣೆಗೆ ಅಗತ್ಯವಿರುವ ಪರಿಕರಗಳನ್ನು ವಿತರಣೆ ಮಾಡಲಾಗಿದೆ. ಇದುವರೆಗೆ 52 ಯೋಜನಾ ವ್ಯಾಪ್ತಿಯ ವಿಪತ್ತು ನಿರ್ವಹಣಾ ಸಮಿತಿಗಳಿಗೆ 85,86,262/- ರೂಪಾಯಿ ಮೌಲ್ಯದ ಪರಿಕರಗಳನ್ನು ಒದಗಿಸಲಾಗಿದೆ. ಲೈಫ್ ಜಾಕೆಟ್, ಲೈಫ್ ಬಾಯ್, ಲ್ಯಾಡರ್, ಸ್ಟ್ರೆಚರ್, ಫೈರ್ ಎಕ್ಸಟಿಂಗ್ವಿಶರ್, ಸೇಫ್ಟಿ ಹೆಲ್ಮೆಟ್, ಚೈನ್ ಸಾ, ಫಸ್ಟ್ ಆಡ್ ಕಿಟ್ ಸೇರಿದಂತೆ ಸುಮಾರು 20 ಬಗೆಯ ಉಪಕರಣಗಳನ್ನು ಪ್ರತಿ ಸಮಿತಿಗಳಿಗೆ ನೀಡಲಾಗಿದೆ. ಅತೀವೃಷ್ಠಿ, ಪ್ರವಾಹ, ಭೂಕಂಪ, ಚಂಡಮಾರುತ ಮತ್ತಿತರ ವಿಪತ್ತಿನ ಸಂದರ್ಭಗಳಲ್ಲಿ ಸ್ವಯಂಸೇವಕರು ಈ ಪರಿಕರಗಳನ್ನು ಉಪಯೋಗಿಸುತ್ತಿದ್ದಾರೆ. ಗಿಡನಾಟಿ, ಸ್ವಚ್ಚತಾ ಕಾರ್ಯಕ್ರಮಗಳು, ರಸ್ತೆ ರಿಪೇರಿ, ಬಡ ಕುಟುಂಬಕ್ಕೆ ಮನೆ ರಚನೆ ಮುಂತಾದ ಸಾಮಾಜಿಕ ಸೇವಾ ಚಟುವಟಿಕೆಗಳ ಸಮಯದಲ್ಲಿ ಕೂಡ ಈ ಉಪಕರಣಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಉಪಕರಣಗಳನ್ನು ತಾಲ್ಲೂಕು ವ್ಯಾಪ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರ ಅಥವಾ ಕಾರ್ಯಾಚರಣೆಗೆ ಸೂಕ್ತವಾಗಿರುವ ತಾಲ್ಲೂಕು ಯೋಜನಾಧಿಕಾರಿಗಳು ಸೂಚಿಸಿದ ಸ್ಥಳಗಳಲ್ಲಿ ಸಂಗ್ರಹಿಸಿ ಇಡಲಾಗಿದ್ದು ಸ್ವಯಂಸೇವಕರಿಗೆ ಕ್ಲಪ್ತ ಸಮಯಕ್ಕೆ ಸಿಗುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ವಿತರಣೆ ಹಾಗೂ ಹಿಂಪಡೆದುಕೊಳ್ಳುವ ಕುರಿತು ಸೂಕ್ತ ದಾಖಲಾತಿ ಇಟ್ಟುಕೊಳ್ಳಲಾಗುತ್ತಿದೆ. ಈ ಪ್ರಯುಕ್ತ ವಿಪತ್ತು ನಿರ್ವಹಣಾ ವಿಭಾಗದ ಮೂಲಕ ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು 209/EDOO/2020-21 ಸುತ್ತೋಲೆಯನ್ನು ನೀಡಿರುತ್ತಾರೆ.




**ಪರಿಕರ ವಿತರಣೆಯ ಹಾಗೂ ವಿನಿಯೋಗಿಸಿದ ಮೊತ್ತದ ವಿವರ ಈ ಕೆಳಗಿನಂತಿದೆ.**

| ಕ್ರ. ಸಂ. | ತಾಲೂಕು | ಪರಿಕರಗಳ ಸಂಖ್ಯೆ | ಖರ್ಚಾದ ವೆಚ್ಚ |
|---|---|---|---|
| 1 | ಬೆಳ್ತಂಗಡಿ | 34 | 1,86,391 |
| 2 | ಗುರುವಾಯನಕೆರೆ | 23 | 1,23,722 |
| 3 | ಸುಳ್ಯ | 23 | 1,56,844 |
| 4 | ಕುಮಟಾ | 23 | 1,59,794 |
| 5 | ಹೊನ್ನಾವರ | 23 | 1,58,024 |
| 6 | ಕಾರವಾರ | 23 | 1,58,024 |
| 7 | ವಿರಾಜಪೇಟೆ | 23 | 1,58,024 |
| 8 | ಸೋಮವಾರಪೇಟೆ | 23 | 1,58,024 |
| 9 | ಸಕಲೇಶಪುರ | 23 | 1,29,402 |
| 10 | ಚಿಕ್ಕಮಗಳೂರು | 23 | 1,59,204 |

| | | | |
|---|---|---|---|
| 11 | ಮೂಡಿಗೆರೆ | 23 | 1,58,024 |
| 12 | ಕೊಪ್ಪ | 23 | 1,57,198 |
| 13 | ಧಾರವಾಡ | 23 | 1,57,420 |
| 14 | ನವಲಗುಂದ | 23 | 1,61,564 |
| 15 | ಚಿಕ್ಕೋಡಿ | 23 | 1,61,564 |
| 16 | ಅಥಣಿ | 23 | 1,61,564 |
| 17 | ನಿಪ್ಪಾಣಿ | 23 | 1,62,154 |
| 18 | ಗೋಕಾಕ್ | 23 | 1,61,564 |
| 19 | ಬಾಗಲಕೋಟೆ | 20 | 1,65,617 |
| 20 | ಬಾದಾಮಿ | 20 | 1,65,617 |
| 21 | ಜಮಖಂಡಿ | 20 | 1,65,617 |
| 22 | ಮುಧೋಳ | 20 | 1,65,617 |
| 23 | ದೇವನಹಳ್ಳಿ | 20 | 1,65,617 |
| 24 | ನೆಲಮಂಗಲ | 20 | 1,65,617 |
| 25 | ದೊಡ್ಡಬಳ್ಳಾಪುರ | 20 | 1,65,617 |
| 26 | ಆನೇಕಲ್ | 20 | 1,65,617 |
| 27 | ಹೊಸಕೋಟೆ | 20 | 1,65,617 |
| 28 | ಮೂಡಿಗೆರೆ | 20 | 1,65,617 |
| 29 | ಉಡುಪಿ | 20 | 1,65,617 |
| 30 | ಕುಂದಾಪುರ | 20 | 1,65,617 |
| 31 | ಭಟ್ಕಳ | 20 | 1,65,617 |
| 32 | ಹಳಿಯಾಳ | 20 | 1,11,303 |
| 33 | ಅಂಕೋಲ | 20 | 1,65,617 |
| 34 | ಬೇಲೂರು | 20 | 1,65,617 |
| 35 | ಹಾಸನ | 20 | 1,62,313 |
| 36 | ಯಲ್ಲಾಪುರ | 20 | 1,76,464 |
| 37 | ಶಿರಸಿ | 20 | 1,76,464 |
| 38 | ಮಂಗಳೂರು | 20 | 1,76,464 |
| 39 | ಕಾಸರಗೋಡು | 20 | 1,76,464 |
| 40 | ಬೈಂದೂರು | 20 | 1,76,464 |
| 41 | ಶೃಂಗೇರಿ | 20 | 1,76,464 |
| 42 | ತೀರ್ಥಹಳ್ಳಿ | 20 | 1,76,464 |
| 43 | ಸಿದ್ಧಾಪುರ | 20 | 1,76,464 |
| 44 | ವಿಟ್ಲ | 20 | 1,76,464 |
| 45 | ಹುಕ್ಕೇರಿ | 20 | 1,76,464 |
| 46 | ಕಡಬ | 20 | 1,76,464 |
| 47 | ಪುತ್ತೂರು | 20 | 1,76,464 |
| 48 | ರಾಯಭಾಗ | 20 | 1,76,464 |
| 49 | ಸಂಕೇಶ್ವರ | 20 | 1,76,464 |
| 50 | ಅಫಜಲಪೂರ | 20 | 1,76,464 |
| 51 | ಸೇಡಂ | 20 | 1,76,464 |
| 52 | ಚಿಂಚೋಳಿ | 20 | 1,76,464 |
| ಒಟ್ಟು ಖರ್ಚಾದ ಮೊತ್ತ | | | 85,86,264 |

## 2.4 ತುರ್ತು ಕ್ಷಿಪ್ರ ತಂಡ ರಚನೆ

ತಾಲೂಕು ಘಟಕಗಳಲ್ಲಿ ವಿಶೇಷ ಕೌಶಲ್ಯ ಹೊಂದಿರುವ ನುರಿತ ಸ್ವಯಂಸೇವಕರನ್ನು ಗುರುತಿಸಿ 8 ಕ್ಷಿಪ್ರ ತಂಡಗಳನ್ನು ರಚಿಸಲಾಗಿದೆ. ಇವರು ರಾಜ್ಯದಲ್ಲಿ, ಜಿಲ್ಲೆಯಲ್ಲಿ, ತಾಲೂಕಿನಲ್ಲಿ ಮತ್ತು ಸ್ಥಳೀಯವಾಗಿಯೂ ಯಾವ ಸಂದರ್ಭದಲ್ಲಿಯೂ ಸಜ್ಜಾಗಿ ನಿಲ್ಲುವಂತೆ ಈ ತಂಡವನ್ನು ತರಬೇತುಗೊಳಿಸಲಾಗಿದೆ. ಮುಖ್ಯವಾಗಿ ಕಾಡ್ಗಿಚ್ಚು, ರಸ್ತೆ ಅಪಘಾತ, ಅನಾರೋಗ್ಯ, ಬೆಂಕಿ, ಪ್ರವಾಹ, ಅತಿವೃಷ್ಟಿ, ಕಟ್ಟಡ ಕುಸಿತ, ಭೂ ಕುಸಿತ., ಮುಂತಾದ ಸಂದರ್ಭದಲ್ಲಿ ತಕ್ಷಣ ಸ್ಪಂದಿಸುವಂತೆ ಇವರಿಗೆ ನಿರ್ದೇಶನ ನೀಡಲಾಗಿದೆ. ಇವರನ್ನು ಸ್ಥಳೀಯ ಪೋಲೀಸ್, ಅಗ್ನಿಶಾಮಕ ಇಲಾಖೆಯೊಂದಿಗೂ ಸಂಪರ್ಕ ಸಾಧಿಸುವಂತೆ ವ್ಯವಸ್ಥೆ ಮಾಡಲಾಗಿದೆ. ತಾಲ್ಲೂಕು, ಜಿಲ್ಲೆ ಹಾಗೂ ಹೊರ ಜಿಲ್ಲಾ ವ್ಯಾಪ್ತಿಯಲ್ಲಿ ವಿಪತ್ತುಗಳು ಸಂಭವಿಸಿದರೆ ಸಹ ತುರ್ತಾಗಿ ಧಾವಿಸುವ ವ್ಯವಸ್ಥೆಯನ್ನು ಇವರು ಹೊಂದಿರುತ್ತಾರೆ. ಈ ತಂಡದಲ್ಲಿ ವಾಹನ ಹೊಂದಿರುವವರು, ವಾಹನ ಚಾಲಕರು, ದೋಣಿ ಚಾಲಕರು, ಇಲೆಕ್ಟ್ರಿಷಿಯನ್, ಈಜು ತಜ್ಞರು, ಉರಗ ಪ್ರೇಮಿಗಳು, ಕಟ್ಟಡ ಕಾಮಗಾರಿ ನಿಪುಣತೆ ಹೊಂದಿರುವ ಮೇಸ್ತ್ರಿಗಳು ಹೀಗೆ ಹಲವು ಕೌಶಲ್ಯ ಹೊಂದಿರುವವರು ಇರುತ್ತಾರೆ. ಮುಂದಿನ ದಿನಗಳಲ್ಲಿ ಪ್ರತೀ ತಾಲ್ಲೂಕುಗಳಲ್ಲಿ ತುರ್ತು ಸ್ಪಂದನಾ ತಂಡವನ್ನು ರಚಿಸುವ ಉದ್ದೇಶ ಹೊಂದಲಾಗಿದೆ.





ಪ್ರಸ್ತುತ ಕಾರ್ಯಾಚರಿಸುತ್ತಿರುವ ಕ್ಷಿಪ್ರ ತಂಡಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಜಿಲ್ಲೆ | ತಾಲೂಕು | ಸದಸ್ಯರು |
|---|---|---|---|
| 1 | ದ. ಕ. 1 | ಬೆಳ್ತಂಗಡಿ | 21 |
| 2 | ಉ. ಕ. | ಕುಮಟಾ | 20 |
| 3 | ದ. ಕ. 2 | ಕಡಬ | 20 |
| 4 | ಚಿಕ್ಕಮಗಳೂರು | ಕಳಸ | 30 |
| 5 | ಚಿಕ್ಕಮಗಳೂರು | ಮೂಡಿಗೆರೆ-ಬಣಕಲ್ | 15 |
| 6 | ಉ.ಕ. | ಅಂಕೋಲ | 8 |
| 7 | ಕೊಡಗು | ಮಡಿಕೇರಿ | 12 |
| 8 | ಸುಳ್ಯ | ಸಂಪಾಜೆ | 10 |
| 9 | ಕುಂದಾಪುರ | ಕುಂದಾಪುರ | 10 |
| 10 | ಪುತ್ತೂರು | ಪುತ್ತೂರು | 15 |

## 2.5 ವಿಪತ್ತು ಸೇವಾ ಚಟುವಟಿಕೆಗಳು

ವಿವಿಧ ತರಬೇತಿಗಳನ್ನು ಪಡೆದು ಕೌಶಲ್ಯ ವೃದ್ಧಿಸಿಕೊಂಡಿರುವ ವಿಪತ್ತು ನಿರ್ವಹಣಾ ಘಟಕಗಳ ಸ್ವಯಂಸೇವಕರು ನಿರಂತರವಾಗಿ ವಿಪತ್ತು ನಿರ್ವಹಣಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಪ್ರಸ್ತುತ ವರ್ಷದಲ್ಲಿ 10,213 ಹಾಗೂ ಮೂರು ವರ್ಷಗಳ ಅವಧಿಯಲ್ಲಿ 35,604 ವಿಪತ್ತು ಸ್ಪಂದನಾ ಚಟುವಟಿಕೆಗಳನ್ನು ಸ್ವಯಂಸೇವಕರು ನಡೆಸಿರುತ್ತಾರೆ. ತಮ್ಮ ಕಿವಿಗೆ ಕೇಳಿದ, ಕಣ್ಣಿನಿಂದ ನೋಡಿದ, ಪತ್ರಿಕೆಗಳಲ್ಲಿ ಓದಿದ, ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸಿದ ವಿಪತ್ತಿನ ಕುರಿತು ಮಾಹಿತಿಯನ್ನು ಆಧರಿಸಿ ಘಟನೆ ಸಂಭವಿಸಿದ ಸ್ಥಳಕ್ಕೆ ಧಾವಿಸಿ ತುರ್ತು ಸ್ಪಂದನೆಯನ್ನು ನೀಡುತ್ತಿದ್ದಾರೆ. ಯಾವುದೇ ವಿಪತ್ತಿನ ಸಂದರ್ಭದಲ್ಲಿ ಸಾರ್ವಜನಿಕರಿಂದ ಪೋಲೀಸ್ ಅಥವಾ ಅಗ್ನಿಶಾಮಕ ಇಲಾಖೆಗೆ ಮಾಹಿತಿ ಬಂದಾಗ

ಇಲಾಖೆಯಿಂದ ಸ್ವಯಂಸೇವಕರ ನೆರವು ಪಡೆದುಕೊಳ್ಳಲಾಗುತ್ತಿದೆ. ಜಿಲ್ಲಾಡಳಿತ, ತಾಲೂಕು ಆಡಳಿತ, ಪೋಲಿಸು ಇಲಾಖೆ, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಗಳು ಸ್ವಯಂಸೇವಕರ ಸಹಕಾರವನ್ನು ಪಡೆದುಕೊಂಡು ಅನೇಕ ಯಶಸ್ವೀ ಕಾರ್ಯಾಚರಣೆಗಳನ್ನು ನಡೆಸಿರುತ್ತಾರೆ.






ಘಟಕಗಳು ನಿರ್ವಹಿಸಿದ ವಿಪತ್ತು ಸೇವಾ ಚಟುವಟಿಕೆಗಳ ವಿವರಣೆ ಈ ಕೆಳಗಿನಂತಿದೆ

| ಕ್ರ. ಸಂ. | ನಿರ್ವಹಿಸಿದ ವಿಪತ್ತು ಸೇವಾ ಚಟುವಟಿಕೆಗಳು | ಪ್ರಸ್ತುತ | ಇದುವರೆಗೆ ಒಟ್ಟು |
|---|---|---|---|
| 1 | ಪ್ರವಾಹ ಕಾರ್ಯಾಚರಣೆ | 286 | 380 |
| 2 | ಬೆಂಕಿ ಅವಘಡ ನಿರ್ವಹಣೆ | 618 | 1864 |
| 3 | ಗುಡ್ಡ ಕುಸಿತ ಕಾರ್ಯಾಚರಣೆ | 27 | 54 |
| 4 | ಗ್ಯಾಸ್ ಸಿಲಿಂಡರ್ ಸ್ಫೋಟ ಕಾರ್ಯಾಚರಣೆ | 23 | 30 |
| 5 | ರಸ್ತೆ ಅಪಘಾತಕ್ಕೆ ಸ್ಪಂದನೆ | 2840 | 6977 |
| 6 | ಅಪಘಾತಕ್ಕೀಡಾದ ಪ್ರಾಣಿಗಳಿಗೆ ಸ್ಪಂದನೆ | 183 | 237 |
| 7 | ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವುದು | 7 | 15 |
| 8 | ಅಗ್ನಿಶಾಮಕ ಅಧಿಕಾರಿಗಳೊಂದಿಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವುದು | 163 | 547 |
| 9 | ಪೊಲೀಸ್ ಅಧಿಕಾರಿಗಳೊಂದಿಗೆ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿರುವುದು. | 69 | 212 |
| 10 | ರಕ್ತದಾನ | 2681 | 7168 |
| 11 | ತೀವ್ರ ಮಳೆಯಿಂದ ಕುಸಿತವಾದ ಮನೆಗೆ ಅಗತ್ಯ ಸ್ವಚ್ಛತಾ ಕಾರ್ಯದಲ್ಲಿ ಸಹಕಾರ ನೀಡಿರುವುದು | 247 | 2465 |
| 12 | ಬಾವಿ, ಕೆರೆ, ನದಿಯಲ್ಲಿ ಮರಣಹೊಂದಿದ ವ್ಯಕ್ತಿ, ಪ್ರಾಣಿಗಳನ್ನು ತೆರವುಗೊಳಿಸುವ ಕಾರ್ಯಾಚರಣೆ | 38 | 81 |
| 13 | ಕಿಂಡಿ ಆಣೆಕಟ್ಟು ಸ್ವಚ್ಛತೆ | 84 | 402 |
| 14 | ರಸ್ತೆಯಲ್ಲಿ ಬಿದ್ದಿರುವ ಮರಗಳನ್ನು ತೆರವುಗೊಳಿಸಿರುವುದು | 638 | 4785 |
| 15 | ವಿದ್ಯುತ್ ತಂತಿಯ ಮೇಲೆ ಬಿದ್ದ ಮರ ತೆರವು | 64 | 391 |
| 16 | ಕಾಡು ಪ್ರಾಣಿಗಳ ಹಾವಳಿ ತಡೆಯುವ ಕುರಿತು ಚಟುವಟಿಕೆ | 37 | 119 |
| 17 | ಪ್ರಥಮ ಚಿಕಿತ್ಸೆ ನೀಡಿರುವುದು | 1628 | 2975 |
| 18 | ಮರಣ ಹೊಂದಿದ ಪ್ರಾಣಿಗಳನ್ನು ತೆರವುಗೊಳಿಸಿ ದಫನ ಮಾಡಿರುವುದು | 167 | 795 |
| 19 | ಹಾವು ಹಿಡಿದು ಕಾಡಿಗೆ ಬಿಟ್ಟಿರುವುದು | 387 | 5171 |
| 20 | ಅನಾರೋಗ್ಯ ಪೀಡಿತರಿಗೆ ತುರ್ತಾಗಿ ಆಸ್ಪತ್ರೆಗೆ ಕರೆದೊಯ್ಯಲು ಸಹಕರಿಸುವುದು | 24 | 928 |
| 21 | ನಾಪತ್ತೆಯಾದ ವ್ಯಕ್ತಿಗಳ ಶೋಧನೆ | 2 | 8 |

## 2.6 ಸಾಮಾಜಿಕ ಸೇವಾ ಕಾರ್ಯಗಳು

ವಿಕೋಪ ಸಂಭವಿಸದ ಸಾಮಾನ್ಯ ದಿನಗಳಲ್ಲಿ ಸ್ವಯಂಸೇವಕರು ಸಾಮಾಜಿಕ ಕಳಕಳಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪ್ರೇರಣೆ ನೀಡಲಾಗುತ್ತಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳಾದ ವಾತ್ಸಲ್ಯ ಮನೆ ರಚನೆ, ಶ್ರದ್ಧಾ ಕೇಂದ್ರಗಳ ಸ್ವಚ್ಛತೆ, ಪರಿಸರ ರಕ್ಷಣೆ, ಸ್ವಚ್ಛ ಭಾರತ್ ಕಾರ್ಯಕ್ರಮ, ದುಶ್ಚಟಗಳ ವಿರುದ್ಧ ಜಾಗೃತಿ, ಶೌಚಾಲಯದ ಮಹತ್ವದ ಬಗ್ಗೆ ಅರಿವು ಮೂಡಿಸುವುದು, ಆರೋಗ್ಯ ಕಾರ್ಯಕ್ರಮ, ಧಾರ್ಮಿಕ ಕಾರ್ಯಕ್ರಮ, ನಾಗರಿಕ ಪ್ರಜ್ಞೆ, ಭೂಮಿ ತಾಯಿಯನ್ನು ರಕ್ಷಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸಿ ಮುಂತಾದ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರಿಗೆ ತೊಡಗಿಕೊಳ್ಳಲು ಪ್ರೇರಣೆ ನೀಡಲಾಗುತ್ತಿದೆ. ಪ್ರಸ್ತುತ ವರ್ಷದಲ್ಲಿ 7,924 ಹಾಗೂ ಮೂರು ವರ್ಷಗಳ ಅವಧಿಯಲ್ಲಿ 41,072 ಸಾಮಾಜಿಕ ಸೇವಾ ಚಟುವಟಿಕೆಗಳನ್ನು ನಡೆಸಿರುತ್ತಾರೆ.









**ನಡೆಸಲಾದ ಚಟುವಟಿಕೆಗಳ ವಿವರ ಹೀಗಿದೆ**

| ಕ್ರ. ಸಂ. | ನಿರ್ವಹಿಸಿದ ಸಾಮಾಜಿಕ ಸೇವಾ ಕಾರ್ಯಗಳು | ವರದಿ ವರ್ಷ | ಒಟ್ಟು |
|---|---|---|---|
| 1 | ವಿವಿಧ ರೀತಿಯ ಸ್ವಚ್ಛತಾ ಕಾರ್ಯಗಳು | 3861 | 12347 |
| 2 | ತೊಂದರೆಯಲ್ಲಿರುವ ಜಾನುವಾರುಗಳಿಗೆ ಚಿಕಿತ್ಸೆ | 124 | 763 |
| 3 | ರಸ್ತೆ ಬದಿಯಲ್ಲಿನ ಪೊದೆ, ಮುಳ್ಳು ಕಂಟಿಗಳನ್ನು ತೆರವುಗೊಳಿಸುವುದು | 63 | 2003 |
| 4 | ಗಿಡ ನಾಟಿ ಕಾರ್ಯಕ್ರಮಗಳು | 1804 | 6122 |
| 5 | ಜಾನುವಾರುಗಳಿಗೆ ಕುಡಿಯುವ ನೀರು/ಮೇವು ವ್ಯವಸ್ಥೆ | 46 | 862 |
| 6 | ರಕ್ತದಾನ ಶಿಬಿರ ಏರ್ಪಡಿಸುವುದು | 46 | 82 |
| 7 | ಕೋವಿಡ್ ಲಸಿಕೆಗಳನ್ನು ಪಡೆಯಲು ಸಹಾಯ ಮಾಡಿರುವುದು | – | 663 |
| 8 | ಘಟಕದ ಸ್ವಯಂಸೇವಕರು ತೊಂದರೆಯಲ್ಲಿದ್ದಾಗ ಸಹಾಯ ಮಾಡಿರುವುದು | 38 | 484 |

| | | | |
|---|---|---|---|
| 9 | ಬರಗಾಲದಲ್ಲಿ ಕುಡಿಯುವ ನೀರು ಒದಗಣೆ | 63 | 113 |
| 10 | ನಿರಾಶ್ರಿತರ ಕೇಂದ್ರಗಳಿಗೆ/ಸಂಸ್ತ್ರಸ್ಥರ ಕೇಂದ್ರ ಭೇಟಿ ಮಾಡಿ ಸಾಂತ್ವಾನ ಹೇಳುವುದು ಮತ್ತು ಅಗತ್ಯ ಸೇವಾ ಕಾರ್ಯದಲ್ಲಿ ತೊಡಗಿಕೊಳ್ಳುವುದು | 13 | 600 |
| 11 | ಗ್ರಾಮ ಸಭೆಯಲ್ಲಿ ಪಾಲ್ಗೊಂಡು ವಿಪತ್ತು ನಿರ್ವಹಣೆಯ ಕುರಿತು ಮಾಹಿತಿ ನೀಡುವುದು | 137 | 231 |
| 12 | ವಿವಿಧ ಇಲಾಖೆಗಳ ಸೌಹಾರ್ದ ಸಭೆ ಅಥವಾ ಇತರೇ ಸಭೆಗಳಲ್ಲಿ ಭಾಗಿಯಾಗಿ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡುವುದು | 35 | 96 |
| 13 | ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಯಿಸಿ ಇಲಾಖಾ ಸೌಲಭ್ಯಗಳ ಬಗ್ಗೆ ಮಾಹಿತಿ ಕೊಡಿಸುವುದು | 13 | 32 |
| 14 | ಗ್ರಾಮದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಸನ್ಮಾನಿಸುವುದು. | 48 | 71 |
| 15 | ಇಲಾಖೆಗಳಿಂದ ಸೌಲಭ್ಯಗಳನ್ನು ಕೊಡಿಸಲು ನೆರವಾಗಿರುವುದು | 29 | 476 |
| 16 | ಜನಪ್ರತಿನಿಧಿಗಳನ್ನು ಹಾಗೂ ಸರ್ಕಾರಿ ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಯಿಸಿ ಸಮಸ್ಯೆಯ ಬಗ್ಗೆ ಗಮನ ಸೆಳೆಯುವುದು | 38 | 61 |
| 17 | ಮದ್ಯಪಾನಿಯನ್ನು ಮದ್ಯವರ್ಜನ ಶಿಬಿರಕ್ಕೆ ಸೇರಿಸುವುದು | 27 | 68 |
| 18 | ಶಾಲೆ ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕರಿಗೆ ಅಗ್ನಿಶಾಮಕ ದಳದಿಂದ ವಿಪತ್ತು ನಿರ್ವಹಣೆ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮ ಏರ್ಪಡಿಸುವುದು | 16 | 32 |
| 19 | ತುರ್ತು ಸಹಾಯವಾಣಿಗೆ ಕರೆ ಮಾಡಿ ತೊಂದರೆಯಲ್ಲಿರುವವರಿಗೆ ಸ್ಪಂದನೆ. | 326 | 3562 |
| 20 | ಸಾರ್ವಜನಿಕ ನಲ್ಲಿ ನೀರು ಸೋರದಂತೆ ತಡೆಯುವುದು | 76 | 510 |
| 21 | ಸ್ವಯಂಸೇವಕರ ಇಲಾಖೆಗಳ ಭೇಟಿ | 136 | 218 |
| 22 | ವಿಶೇಷ ದಿನಾಚರಣೆಗಳ ಆಚರಣೆ | 416 | 4377 |
| 23 | ಸಮಸ್ಯೆಯಲ್ಲಿರುವ ರೈತರಿಗೆ ಸ್ಪಂದಿಸುವುದು | 13 | 184 |
| 24 | ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ವಿಪತ್ತು ನಿರ್ವಹಣೆ ಘಟಕದ ಪ್ರತಿನಿಧಿಯಾಗಿ ಭಾಗವಹಿಸುವಿಕೆ | 68 | 659 |
| 25 | ದಾನಿಗಳ ಸಹಕಾರ ಪಡೆದು ಸಂತ್ರಸ್ಥರಿಗೆ ಆಹಾರ ಧಾನ್ಯ ಮತ್ತಿತರ ಕಿಟ್ ಗಳ ವಿತರಣೆ | 21 | 264 |
| 26 | ಯೋಜನೆಯಿಂದ ಮಾಶಾಸನ ನೀಡುತ್ತಿರುವ ಕುಟುಂಬ ಭೇಟಿ, ವೃದ್ಧರು ಅನಾರೋಗ್ಯದಿಂದ ಬಳಲುತ್ತಿರುವವರ ಮನೆ ಭೇಟಿ ಮತ್ತು ಸಾಂತ್ವಾನ ಹೇಳುವುದು | 318 | 4507 |
| 27 | ನಿರ್ಗತಿಕರ/ಅನಾಥರ ಶವ ಸಂಸ್ಕಾರದಲ್ಲಿ ಪಾಲ್ಗೊಂಡಿರುವುದು | 16 | 254 |
| 28 | ಬಡ ಕುಟುಂಬಕ್ಕೆ ಮನೆ ರಚನೆ/ರಿಪೇರಿ ಶ್ರಮದಾನ | 48 | 274 |
| 29 | ಸಾರ್ವಜನಿಕ ಕಟ್ಟಡ ರಚನೆಗೆ ಶ್ರಮದಾನ | 4 | 26 |
| 30 | ರಸ್ತೆ ರಿಪೇರಿ ಮತ್ತು ರಚನೆ ಶ್ರಮದಾನ | 37 | 774 |
| 31 | ಕುಡಿಯುವ ನೀರಿನ ಬಾವಿ ಸ್ವಚ್ಛತೆ | 28 | 171 |
| 32 | ಬಡ ಕುಟುಂಬಕ್ಕೆ ಶೌಚಾಲಯ ರಚನೆ/ರಿಪೇರಿ | 3 | 7 |
| 33 | ಕಾಲುವೆ ದುರಸ್ಥಿ | 13 | 179 |

## 2.7 ವಿಶೇಷ ವಿಪತ್ತು ಸ್ಪಂದನಾ ಚಟುವಟಿಕೆಗಳು

2022 ರ ಮಳೆಗಾಲದಲ್ಲಿ ಸುಳ್ಯ ತಾಲ್ಲೂಕಿನಲ್ಲಿ ಅತಿಯಾದ ಮಳೆಯಿಂದಾಗಿ ಗುಡ್ಡ ಜರಿತ ಹಾಗೂ ಪ್ರವಾಹದ ಪರಿಸ್ಥಿತಿ ತಲೆದೋರಿತ್ತು. ಸುಳ್ಯ ತಾಲ್ಲೂಕಿನ ಹತ್ತಕ್ಕೂ ಹೆಚ್ಚು ಗ್ರಾಮಗಳಲ್ಲಿ ಜನರು, ಜಾನುವಾರುಗಳು ತೊಂದರೆ ಅನುಭವಿಸಿದ್ದವು. ಕೊಡಗು ಸಂಪಾಜೆ ಪ್ರದೇಶಗಳಲ್ಲಿ ಲಘು ಭೂಕಂಪ ಸಂಭವಿಸಿ ಅನೇಕ ಮನೆಗಳಲ್ಲಿ ಗೋಡೆಗಳಲ್ಲಿ ಬಿರುಕು ಮೂಡಿದ್ದು ಕಂಡುಬಂದಿದ್ದು. ಜನರು ಭಯಭೀತರಾಗಿದ್ದರು. ಇಂತಹ ಸಂದರ್ಭಗಳಲ್ಲಿ ಶೌರ್ಯ ಸ್ವಯಂಸೇವಕರು ಜನರನ್ನು ಸುರಕ್ಷಿತ ಸ್ಥಳಕ್ಕೆ ವರ್ಗಾಯಿಸುವ ಕೆಲಸ ಮಾಡಿರುತ್ತಾರೆ. ಪ್ರವಾಹ ಪರಿಸ್ಥಿತಿಯಿಂದ 30

ಕ್ಕೂ ಅಧಿಕ ಮನೆಗಳು ನೆಲಸಮವಾಗಿದ್ದು ಮನೆ ಕಟ್ಟಿಕೊಡುವ ಮತ್ತು ತಾತ್ಕಾಲಿಕ ವಾಸ್ತವ್ಯ ವ್ಯವಸ್ಥೆಗೆ ಮನೆ ನಿರ್ಮಾಣ ಮಾಡುವ ಕೆಲಸವನ್ನು ಸ್ವಯಂಸೇವಕರು ಮಾಡಿರುತ್ತಾರೆ. 15 ಕ್ಕೂ ಹೆಚ್ಚು ಕಾಲು ಸೇತುವೆಗಳನ್ನು ನಿರ್ಮಾಣ ಮಾಡಿ ಸಂಪರ್ಕ ವ್ಯವಸ್ಥೆಯನ್ನು ಮಾಡಿರುತ್ತಾರೆ. ಪ್ರವಾಹದಿಂದಾಗಿ ಮನೆಯೊಳಗೆ ನೀರು ನುಗ್ಗಿ ಕೆಸರುಮಯವಾಗಿದ್ದು ವಾಸಕ್ಕೆ ಕಷ್ಟವಾಗಿರುವ ಮನೆಗಳನ್ನು ಗುರುತಿಸಿ ಕೆಸರನ್ನು ತೆರವುಗೊಳಿಸಿ ಸ್ವಚ್ಛತೆಗೆ ಸಹಕರಿಸುವ ಕೆಲಸವನ್ನು ಮಾಡಿರುತ್ತಾರೆ. ರಸ್ತೆಗಳು ಕೊಚ್ಚಿಹೋಗಿ ವಾಹನ ಸಂಚಾರಕ್ಕೆ ಅನಾನುಕೂಲವಾಗಿ ಪರಿಣಮಿಸಿದ್ದು ಸುಮಾರು 10 ಕ್ಕೂ ಹೆಚ್ಚು ರಸ್ತೆಗಳನ್ನು ರಿಪೇರಿಗಳನ್ನು ಮಾಡಿರುತ್ತಾರೆ. ಸುಮಾರು 15 ದಿನಗಳ ಕಾಲ ವಿಪತ್ತು ನಿರ್ವಹಣಾ ಸ್ವಯಂಸೇವಕರು ವಿಪತ್ತು ಸ್ಪಂದನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಇದೇ ಸಂದರ್ಭದಲ್ಲಿ ಬೆಳ್ತಂಗಡಿ ತಾಲೂಕು ಸಮಿತಿಯ 60ಕ್ಕೂ ಹೆಚ್ಚು ಸ್ವಯಂ ಸೇವಕರು ಶ್ರಮದಾನದಲ್ಲಿ ಭಾಗವಹಿಸಿ ರಸ್ತೆ ನಿರ್ಮಾಣ, ಸೇತುವೆಯ ರಿಪೇರಿ, ಸೇತುವೆಯ ಅಡಿಯಲ್ಲಿ ಸಿಲುಕಿದ ಮರಮಟ್ಟುಗಳ ತೆರವು, ಮನೆ ರಿಪೇರಿ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ.













## 2.8 ಸಮವಸ್ತ್ರ ಮತ್ತು ಪ್ರಮಾಣಪತ್ರ ವಿತರಣೆ

ಎನ್.ಡಿ.ಆರ್.ಎಫ್, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಮೂಲಕ ತರಬೇತಿಯನ್ನು ಪೂರೈಸಿದ ವಿಪತ್ತು ಸೇವಾ ಸಮಿತಿಯ ಸ್ವಯಂಸೇವಕರಿಗೆ ಪ್ರಮಾಣಪತ್ರವನ್ನು ನೀಡಲಾಗಿದೆ. ಅಲ್ಲದೇ ಎಲ್ಲಾ ಸ್ವಯಂಸೇವಕರಿಗೆ ಸಮವಸ್ತ್ರವನ್ನು ವಿತರಣೆ ಮಾಡಲಾಗಿದೆ. ಸಮವಸ್ತ್ರವಾಗಿ ಒಂದು ಟೀ ಶರ್ಟ್ ಹಾಗೂ ಒಂದು ಪ್ಯಾಂಟ್ ನೀಡಲಾಗಿದೆ. ಒಂದು ವರ್ಷ ಪೂರೈಸಿದ ಸಮಿತಿಗಳ ಸ್ವಯಂಸೇವಕರಿಗೆ ತಲಾ ಎರಡು ಸಮವಸ್ತ್ರ ನೀಡಲಾಗಿದೆ. ಸಮವಸ್ತ್ರವನ್ನು ಧರಿಸಿದ ಸ್ವಯಂಸೇವಕರು ವಿಪತ್ತು ಸೇವೆ ಹಾಗೂ ಸಾಮಾಜಿಕ ಸೇವೆ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ.








## 2.9 ಕ್ಯಾಪ್ ಮತ್ತು ಶೌರ್ಯ ಲೋಗೊ ಬಿಡುಗಡೆ

ವಿಪತ್ತು ನಿರ್ವಹಣಾ ಸ್ವಯಂಸೇವಕರಿಗೆ ಕೆಲವೊಮ್ಮೆ ತುರ್ತು ಸಹಾಯಕ್ಕೆ ಧಾವಿಸುವ ಸಮಯದಲ್ಲಿ ಸಮವಸ್ತ್ರ ಧರಿಸಲು ಸಾಧ್ಯವಾಗದೇ ಇರಬಹುದು. ಇಂತಹ ಸಂದರ್ಭದಲ್ಲಿ ಶೌರ್ಯ ಸ್ವಯಂಸೇವಕರಿಗೆ ಗುರುತಿಸಿಕೊಳ್ಳಲು ಅನುಕೂಲವಾಗುವಂತೆ ಶೌರ್ಯ ಕ್ಯಾಪ್ ವಿಶೇಷವಾಗಿ ತಯಾರಿಸಲಾಗಿದ್ದು ಇದನ್ನು ಹಾಗೂ ಶೌರ್ಯ ಲೋಗೊವನ್ನು ಪೂಜ್ಯರು ಕೇಂದ್ರ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಮತ್ತು ಇದೇ ಸಂದರ್ಭದಲ್ಲಿ ಬೆಳ್ತಂಗಡಿ ಹಾಗೂ ಗುರುವಾಯನಕೆರೆ ಸ್ವಯಂಸೇವಕರಿಗೆ ವಿತರಣೆ ಮಾಡಿದರು.







ಇದುವರೆಗೆ ಸ್ವಯಂಸೇವಕರಿಗೆ ವಿತರಣೆ ಮಾಡಲಾದ ಸಮವಸ್ತ್ರ, ಕ್ಯಾಪ್ ವಿವರ ಈ ಕೆಳಗಿನಂತಿದೆ

| ಕ್ರ ಸಂ. | ತಾಲೂಕು | ಸಮವಸ್ತ್ರ ವಿತರಣೆ | | | ಕ್ರ ಸಂ. | ತಾಲೂಕು | ಸಮವಸ್ತ್ರ ವಿತರಣೆ | | |
|---|---|---|---|---|---|---|---|---|---|
| | | ಟೀಶರ್ಟ್ | ಪ್ಯಾಂಟ್ | ಕ್ಯಾಪ್ | | | ಟೀಶರ್ಟ್ | ಪ್ಯಾಂಟ್ | ಕ್ಯಾಪ್ |
| 1 | ಬೆಳ್ತಂಗಡಿ | 52 | – | 43 | 36 | ಕುಮಟಾ | 75 | – | – |
| 2 | ಗುರುವಾಯನಕೆರೆ | 56 | – | 15 | 37 | ಮೂಡಿಗೆರೆ | 200 | – | – |
| 3 | ನವಲಗುಂದ | 69 | – | – | 38 | ಸುಳ್ಯ | 125 | – | – |
| 4 | ಧಾರವಾಡ | 70 | – | – | 39 | ಬೆಳ್ತಂಗಡಿ | 1 | – | – |
| 5 | ಗುರುವಾಯನಕೆರೆ | 29 | – | – | 40 | ಕಾರವಾರ | 30 | – | – |
| 6 | ಗುರುವಾಯನಕೆರೆ | 9 | – | – | 41 | ಚಿಕ್ಕಮಗಳೂರು | 13 | – | – |
| 7 | ಬೆಳ್ತಂಗಡಿ | 18 | – | – | 42 | ಸಕಲೇಶಪುರ | 15 | – | – |
| 8 | ನಿಪ್ಪಾಣಿ | 46 | – | – | 43 | ಕೊಪ್ಪ | 48 | – | – |
| 9 | ಚಿಕ್ಕೋಡಿ | 105 | – | – | 44 | ಶೃಂಗೇರಿ | 34 | – | – |
| 10 | ಅಥಣಿ | 112 | – | – | 45 | ಹೊನ್ನವರ | 52 | – | – |
| 11 | ಗೋಕಾಕ್ | 114 | – | – | 46 | ಸೋಮವಾರಪೇಟೆ | 8 | – | – |
| 12 | ಕಾರವಾರ-ಅಂಕೋಲಾ | 79 | – | – | 47 | ಭಟ್ಕಳ | 35 | – | – |
| 13 | ಕುಮಟಾ | 111 | – | – | 48 | ಹಳಿಯಾಳ | 3 | – | – |
| 14 | ಹೊನ್ನಾವರ-ಭಟ್ಕಳ | 132 | – | – | 49 | ವಿರಾಜಪೇಟೆ | 28 | – | – |
| 15 | ಸುಳ್ಯ | 122 | 140 | – | 50 | ಉಡುಪಿ | 168 | – | – |
| 16 | ವಿರಾಜಪೇಟೆ | 93 | – | – | 51 | ಕುಂದಾಪುರ | 115 | – | – |
| 17 | ಸೋಮವಾರಪೇಟೆ | 106 | – | – | 52 | ಸುಳ್ಯ | 40 | – | – |
| 18 | ಸಕಲೇಶಪುರ | 79 | – | – | 53 | ಬೆಂಗಳೂರು | 245 | – | – |
| 19 | ಚಿಕ್ಕಮಗಳೂರು | 82 | – | – | 54 | ಗುರುವಾಯನಕೆರೆ | 12 | – | – |
| 20 | ಮೂಡಿಗೆರೆ | 100 | – | – | 55 | ಜಾಗೃತಿ ಸೌಧ | 19 | – | – |
| 21 | ಕೊಪ್ಪ | 112 | – | – | 56 | ಸುಳ್ಯ | 4 | – | – |
| 22 | ಬೆಳ್ತಂಗಡಿ | 10 | – | – | 57 | ಶಾಂತಿಗ್ರಾಮ | 40 | – | – |
| 23 | ಹಳಯಾಳ | 50 | – | – | 58 | ಬೇಲೂರು | 100 | – | – |
| 24 | ಗುರುವಾಯನಕೆರೆ/ಅಳದಂಗಡಿ | 21 | – | – | 59 | ಹಾಸನ | 100 | – | – |
| 25 | ಗುರುವಾಯನಕೆರೆ | 33 | – | – | 60 | ರಾಮದುರ್ಗ | 158 | – | – |
| 26 | ಬೆಳ್ತಂಗಡಿ/ಗುರುವಾಯನಕೆರೆ | 13 | – | – | 61 | ಕುಂದಗೋಳ | 135 | – | – |
| 27 | ಬೆಳ್ತಂಗಡಿ/ಗುರುವಾಯನಕೆರೆ | 21 | – | – | 62 | ಯಲ್ಲಾಪುರ | 110 | – | – |
| 28 | ಬೆಳ್ತಂಗಡಿ/ಗುರುವಾಯನಕೆರೆ | 5 | – | – | 63 | ದೊಡ್ಡಬಳ್ಳಾಪುರ | 21 | – | – |
| 29 | ಬೆಂಗಳೂರು | 25 | – | – | 64 | ಕುಂದಾಪುರ | 70 | – | – |
| 30 | ಮುಧೋಳ | 110 | – | – | 65 | ಕಡಬ | 14 | – | – |
| 31 | ಜಮಖಂಡಿ | 110 | – | – | 66 | ಬೆಳ್ತಂಗಡಿ | 87 | – | – |
| 32 | ಬಾದಾಮಿ | 130 | – | – | 67 | ಕೊಪ್ಪ | 148 | – | – |
| 33 | ಬಾಗಲಕೋಟೆ | 100 | – | – | 68 | ಶೃಂಗೇರಿ | 94 | – | – |
| 34 | ಗುರುವಾಯನಕೆರೆ/ತಣ್ಣೀರುಪಂತ | 8 | – | – | 69 | ಬೆಳ್ತಂಗಡಿ | 9 | – | – |
| 35 | ಗುರುವಾಯನಕೆರೆ/ಹೊಸಂಗಡಿ | 5 | – | – | 70 | ಬೆಳ್ತಂಗಡಿ | 21 | – | – |
| | | | | | 71 | ಮೈಸೂರು ಪ್ರಾದೇಶಿಕ | – | – | 1 |
| ಒಟ್ಟು | | | | | | | 4714 | 140 | 59 |

## 2.10 ಘಟಕದ ಮಾಸಿಕ ಸಭೆಗಳು ಮತ್ತು ತಾಲೂಕು ಸಮಿತಿ ಸಭೆಗಳು

ವಿಪತ್ತು ನಿರ್ವಹಣಾ ಘಟಕಗಳು ಕ್ರಿಯಾಶೀಲವಾಗಿ ತೊಡಗಿಕೊಳ್ಳುವ ನಿಟ್ಟಿನಲ್ಲಿ ಘಟಕಗಳ ಮಾಸಿಕ ಸಭೆಗಳನ್ನು ನಡೆಸಲು ಪ್ರೋತ್ಸಾಹಿಸಲಾಗುತ್ತಿದೆ. ಮಾಸಿಕ ಸಭೆಗಳ ಸಂದರ್ಭದಲ್ಲಿ ಸ್ವಯಂಸೇವಕರು ಸ್ಥಳೀಯವಾಗಿ ಅರ್ಧ ದಿನದ ಶ್ರಮದಾನ ನಡೆಸುತ್ತಿದ್ದಾರೆ. ಸಾರ್ವಜನಿಕ ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛತೆ, ಬಸ್ ತಂಗುದಾಣ ಸ್ವಚ್ಛತೆ, ಶಾಲಾ ಕೈತೋಟ ರಚನೆ, ರಸ್ತೆ ರಿಪೇರಿ, ಬಡ ಕುಟುಂಬಗಳ ಮನೆ ರಿಪೇರಿ, ಗಿಡ ನಾಟಿ, ಬೀಚ್ ಸ್ವಚ್ಛತೆ ಮುಂತಾದ ಕೆಲಸಗಳನ್ನು ಶ್ರಮದಾನಕ್ಕೆಂದು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಸಭೆಯ ದಿನದಂದು ಮುಂದಿನ ದಿನಗಳಲ್ಲಿ ನಿರ್ವಹಿಸಬಹುದಾದ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಯುತ್ತದೆ. ಘಟಕಗಳು ಸುಭದ್ರವಾಗಿ ಚಟುವಟಿಕೆಯಿಂದ ಇರಲು ಈ ಮಾಸಿಕ ಸಭೆಗಳು ಸಹಾಯಕವಾಗುತ್ತಿವೆ.





## 2.11 ಜೀವ ರಕ್ಷಣಾ ಕೌಶಲ್ಯ ತರಬೇತಿ

ವಿಪತ್ತು ನಿರ್ವಹಣಾ ಸ್ವಯಂಸೇವಕರು ಪ್ರಾಣ ರಕ್ಷಣೆಯಂತಹ ಸಾಹಸಯುತವಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿರುವುದರಿಂದ ಸ್ವ ರಕ್ಷಣೆಯೊಂದಿಗೆ ಇತರರ ರಕ್ಷಣೆ ಮಾಡುವ ವಿಧಾನಗಳ ಕುರಿತಂತೆ ವಿಶೇಷವಾದ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ವಿಪತ್ತು ನಿರ್ವಹಣಾ ಸಮಿತಿಗಳಿಗೆ ಪರಿಕರಗಳನ್ನು ಒದಗಿಸಿದ ಮಂಗಳೂರಿನ ಉಷಾ ಫೈರ್ ಸೇಫ್ಟಿ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಜಗದೀಶ್ ಅಡಪ ಮತ್ತು ಅವರ ತರಬೇತುದಾರರ ತಂಡ ಸ್ವಯಂಸೇವಕರಿಗೆ ಒಂದು ದಿನದ ಜೀವ ರಕ್ಷಣಾ ಕೌಶಲ್ಯ ತರಬೇತಿಯನ್ನು ನೀಡಿದೆ. ಪ್ರಥಮ ಚಿಕಿತ್ಸೆ, ರಸ್ತೆ ಅಪಘಾತಗಳಾದಾಗ ತಲೆ, ಕೈ, ಕಾಲುಗಳಿಗೆ ಗಾಯಗಳಾದಾಗ ಬ್ಯಾಂಡೇಜ್ ಮಾಡುವ ವಿಧಾನ, ಗಾಯಾಳು ವ್ಯಕ್ತಿಯ ಆರೋಗ್ಯ ಸ್ಥಿತಿ ಹೇಗಿದೆ ಗುರುತಿಸುವ ವಿಧಾನ, ಕೃತಕ ಉಸಿರಾಟ ನೀಡುವ ಮೂಲಕ ವ್ಯಕ್ತಿಯನ್ನು ಬದುಕಿಸುವ ವಿಧಾನ, ಗ್ಯಾಸ್ ಸೋರಿಕೆಯಾದಾಗ ನಿರ್ವಹಣೆಯ ವಿಧಾನ, ಗ್ಯಾಸ್ ಬೆಂಕಿ ಆದಾಗ ನಂದಿಸುವುದು, ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಉಂಟಾದ ಬೆಂಕಿ ನಂದಿಸುವುದು, ವಿವಿಧ ಅಗ್ನಿ ನಂದಕಗಳ ಬಳಕೆ ವಿಧಾನಗಳು ಹೀಗೆ ವಿವಿಧ ಜೀವ ರಕ್ಷಣಾ ಕೌಶಲ್ಯ ತರಬೇತಿಗಳನ್ನು ನೀಡಲಾಗಿದೆ. ಪ್ರಸ್ತುತ ವರ್ಷದಲ್ಲಿ 26 ತಾಲ್ಲೂಕಿನ 2860 ಸ್ವಯಂಸೇವಕರುಗಳಿಗೆ ಈ ತರಬೇತಿಯನ್ನು ನೀಡಲಾಗಿದೆ.





## 2.12 ವಾತ್ಸಲ್ಯ ಮನೆ ನಿರ್ಮಾಣ

ಬಡವರು, ಅಶಕ್ತರು, ನಿರ್ಗತಿಕರ ಮನೆಗಳನ್ನು ಗುರುತಿಸಿದ ಸ್ವಯಂಸೇವಕರು ಸ್ವಯಂಪ್ರೇರಣೆಯಿಂದ ಅವುಗಳ ರಿಪೇರಿ ಶ್ರಮದಾನವನ್ನು ನಡೆಸಿರುತ್ತಾರೆ. ಮನೆಯೇ ಇಲ್ಲದವರಿಗೆ ಯೋಜನೆಯಿಂದ ಕಟ್ಟಿಕೊಡಲಾಗುತ್ತಿರುವ ವಾತ್ಸಲ್ಯ ಮನೆ ರಚನೆಯ ಕೆಲಸಗಳನ್ನು ಸ್ವಯಂಸೇವಕರು ಮಾಡಿರುತ್ತಾರೆ. ಅಲ್ಲದೇ ಸ್ವತಂತ್ರವಾಗಿ ಸ್ಥಳೀಯ ಗ್ರಾಮಪಂಚಾಯತಿ, ಸಂಘಸಂಸ್ಥೆಗಳು, ದಾನಿಗಳ ಸಹಾಯದಿಂದ ಹೊಸ ಮನೆ ನಿರ್ಮಾಣದ ಕೆಲಸವನ್ನೂ ಮಾಡಿರುತ್ತಾರೆ. ವರದಿ ವರ್ಷದಲ್ಲಿ 48 ಮನೆಗಳನ್ನು ರಚಿಸಲಾಗಿದೆ. ಇದುವರೆಗೆ 216 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಮಾತೃಶ್ರೀ ಅಮ್ಮನವರ ಕಾರ್ಯಕ್ರಮವಾದ ವಾತ್ಸಲ್ಯ ಕಾರ್ಯಕ್ರಮದ ಅಡಿಯಲ್ಲಿ ರಚಿಸಲಾಗುವ ಮನೆ ನಿರ್ಮಾಣಕ್ಕೆ ಸ್ವಯಂಸೇವಕರು ವಿಶೇಷವಾಗಿ

ತೊಡಗಿಕೊಂಡು ಸೇವೆ ಸಲ್ಲಿಸಿರುತ್ತಾರೆ. ಮಳೆಗಾಲದಲ್ಲಿ ಮನೆಗಳಿಗೆ ಹಾನಿಯಾದಾಗ ರಿಪೇರಿ ಮಾಡಿಕೊಡುವುದು, ತೀರಾ ಹಳೆಯ ಮನೆಗಳಾಗಿದ್ದಲ್ಲಿ ರಿಪೇರಿ ಮಾಡಿ ಕೊಡುವ ಕೆಲಸಗಳಲ್ಲಿಯೂ ಸ್ವಯಂಸೇವಕರು ತೊಡಗಿಕೊಂಡಿರುತ್ತಾರೆ. ಬೆಳ್ತಂಗಡಿ ತಾಲ್ಲೂಕಿನ ನೆರಿಯ ಗ್ರಾಮದಲ್ಲಿ ಸುಮಾರು ಒಂದು ತಿಂಗಳುಗಳ ಕಾಲ ಶ್ರಮದಾನ ನಡೆಸಿ ವಿಪತ್ತು ನಿರ್ವಹಣಾ ಸ್ವಯಂಸೇವಕರು ರಚನೆ ಮಾಡಿದ ವಾತ್ಸಲ್ಯ ಮನೆಯನ್ನು ಮಾತೃಶ್ರೀ ಅಮ್ಮನವರು ಭೇಟಿ ಮಾಡಿ ಗ್ರಹ ಪ್ರವೇಶದಲ್ಲಿ ಪಾಲ್ಗೊಂಡು ಸ್ವಯಂಸೇವಕರ ಸೇವೆಗೆ ಶ್ಲಾಘನೆ ವ್ಯಕ್ತಪಡಿಸಿ ಮಾರ್ಗದರ್ಶನ ನೀಡಿದರು.







## 2.13 ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶೌರ್ಯ ಸ್ವಯಂಸೇವಕರು

ಗ್ರಾಮಗಳಲ್ಲಿ ನಡೆಯುವ ದೇವಾಲಯದ ವಾರ್ಷಿಕ ಕಾರ್ಯಕ್ರಮಗಳು, ಜಾತ್ರೆಗಳು, ಹಬ್ಬಗಳು, ಉತ್ಸವಗಳ ಸಂದರ್ಭದಲ್ಲಿ ವಿಪತ್ತು ನಿರ್ವಹಣಾ ಸ್ವಯಂಸೇವಕರು ವಿವಿಧ ರೀತಿಯ ಸೇವೆಗಳನ್ನು ಸಲ್ಲಿಸಿರುತ್ತಾರೆ. ಹೊರೆ ಕಾಣಿಕೆ ಸಂಗ್ರಹಣೆ, ಅನ್ನಸಂತರ್ಪಣೆಗೆ ಸಹಕಾರ, ಅಡುಗೆ ತಯಾರಿ, ಜನಸಂದಣಿ, ವಾಹನ ಸಂದಣಿ ನಿಯಂತ್ರಣೆ, ಸ್ವಚ್ಚತಾ ಶ್ರಮದಾನಗಳು ಹೀಗೆ ಹಲವು ವಿಧದ ಸೇವೆ ಸಲ್ಲಿಸಿರುತ್ತಾರೆ. ವಿಶೇಷವಾಗಿ ಸಮಾರಂಭಗಳು ಮುಗಿದ ನಂತರದಲ್ಲಿ ಸ್ವಚ್ಚತಾ ಶ್ರಮದಾನಗಳಿಗೆ ಸ್ವಯಂಸೇವಕರು ತೊಡಗಿಕೊಂಡು ಪರಿಸರ ಕಾಳಜಿ ತೋರಿಸಿರುತ್ತಾರೆ. ಗ್ರಾಮಗಳಲ್ಲಿ ಯಾವುದೇ ಸಾರ್ವಜನಿಕ ಸಮಾರಂಭಗಳು ನಡೆಯುವಾಗ ಸಂಬಂಧಿಸಿದ ಆಡಳಿತ ಮಂಡಳಿಯವರು ಶೌರ್ಯ ತಂಡಕ್ಕೆ ವಿಶೇಷವಾದ ಆಹ್ವಾನವನ್ನು ನೀಡುತ್ತಿದ್ದು ಸ್ವಯಂಸೇವಕರ ಸಹಕಾರವನ್ನು ಪಡೆದುಕೊಳ್ಳುತ್ತಿದ್ದಾರೆ. ಮಹಾ ಶಿವರಾತ್ರಿಯ ನಿಮಿತ್ತ ರಾಜ್ಯದ ವಿವಿದೆಡೆಗಳಿಂದ ಧರ್ಮಸ್ಥಳಕ್ಕೆ ತೆರಳುವ ಪಾದಯಾತ್ರಿಗಳಿಗೆ ಅಗತ್ಯ ನೆರವು ನೀಡುವ ಕೆಲಸವನ್ನು ವಿಪತ್ತು ನಿರ್ವಹಣಾ ಸ್ವಯಂಸೇವಕರು ನಡೆಸಿರುತ್ತಾರೆ. ಹಾಸನ,

ಚಿಕ್ಕಮಗಳೂರು, ಮೂಡಿಗೆರೆ, ಕಡಬ ಬೆಳ್ತಂಗಡಿ ತಾಲ್ಲೂಕಿನ ಸ್ವಯಂಸೇವಕರು ದಿನನಿತ್ಯ ಅನ್ನಸಂತರ್ಪಣೆ, ಕುಡಿಯುವ ನೀರಿನ ವ್ಯವಸ್ಥೆ, ಆರೋಗ್ಯ ಸೇವೆಯನ್ನು ನೀಡಿರುತ್ತಾರೆ. ಪಾದಯಾತ್ರೆ ಮುಗಿದ ನಂತರ ರಸ್ತೆಯ ಇಕ್ಕೆಲಗಳಲ್ಲಿ ಸ್ವಚ್ಛತಾ ಶ್ರಮದಾನವನ್ನು ಸ್ವಯಂಸೇವಕರು ನಡೆಸಿದ್ದು ದಾರಿಯುದ್ದಕ್ಕೂ ಬಿದ್ದಿದ್ದ ಪ್ಲಾಸ್ಟಿಕ್ ಬಾಟಲಿಗಳು, ಚಪ್ಪಲಿಗಳು, ಬಟ್ಟೆಗಳು, ಪ್ಲಾಸ್ಟಿಕ್ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸುವ ಕೆಲಸವನ್ನು ನಡೆಸಿರುತ್ತಾರೆ.





## 2.14 ಬೀಚ್, ನದಿದಡಗಳು, ಐತಿಹಾಸಿಕ ಸ್ಥಳಗಳು ಹಾಗೂ ಚಾರ್ಮಾಡಿ ಘಟ್ಟ ಸ್ವಚ್ಛತಾ ಕಾರ್ಯಕ್ರಮಗಳು

ಪರಿಸರ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸ್ವಯಂಸೇವಕರು ಸ್ವಚ್ಛತಾ ಕಾರ್ಯಕ್ರಮಗಳಿಗೆ ವಿಶೇಷ ಒತ್ತು ನೀಡಿದ್ದಾರೆ. ಬೆಳ್ತಂಗಡಿ ತಾಲ್ಲೂಕಿನ ನೆರಿಯಾ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಚಾರ್ಮಾಡಿ ಘಟ್ಟದ ಸ್ವಚ್ಛತಾ ಶ್ರಮದಾನವನ್ನು ವರ್ಷದಲ್ಲಿ ಎರಡು ಬಾರಿ ನಡೆಸುತ್ತಿದ್ದಾರೆ. ಪ್ರತಿ ಬಾರಿ ಸುಮಾರು 8 ರಿಂದ 10 ಟಿಪ್ಪರ್ ಲೋಡ್ ಗಳಷ್ಟು ಪ್ಲಾಸ್ಟಿಕ್ ಬಾಟಲಿಗಳು, ತ್ಯಾಜ್ಯಗಳನ್ನು ತೆರವುಗೊಳಿಸುತ್ತಿದ್ದಾರೆ. ಕುಂದಾಪುರ, ಭಟ್ಕಳ, ಮಂಗಳೂರು, ಕಾರವಾರ, ಅಂಕೋಲ ತಾಲ್ಲೂಕಿನ ವಿಪತ್ತು ನಿರ್ವಹಣಾ ಸ್ವಯಂಸೇವಕರು ಸಮುದ್ರದ ಬೀಚ್ ಸ್ವಚ್ಛತಾ ಶ್ರಮದಾನವನ್ನು ಪ್ರತಿ ವರ್ಷ ನಡೆಸುತ್ತಿದ್ದಾರೆ. ಪುರಾತನ ಕಾಲದ ಐತಿಹಾಸಿಕ ಪ್ರಸಿದ್ಧ ದೇವಾಲಯಗಳು, ಪುರಾಣ ಪ್ರಸಿದ್ಧ ಸ್ಥಳಗಳಲ್ಲಿ ಸಹ ಸೇವೆ ಸಲ್ಲಿಸುತ್ತಿದ್ದು ಕ್ಷೇತ್ರದ ಪಾವಿತ್ರ್ಯತೆ ಉಳಿಸಿಕೊಳ್ಳಲು ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಬೇಸಿಗೆಯಲ್ಲಿ ನದಿಗಳು ಬತ್ತುತ್ತಿದ್ದು ದೇವಾಲಯದ ಪರಿಸರದಲ್ಲಿರುವ ದೇವರ ಮೀನುಗಳ ಗುಂಡಿಗಳು ಸಹ ಬತ್ತಿ ಹೋಗುತ್ತಿರುವುದನ್ನು ಗಮನಿಸಿದ ಸ್ವಯಂಸೇವಕರು ದೇವರ ಮೀನುಗಳನ್ನು ಉಳಿಸುವ ಉದ್ದೇಶದಿಂದ ಗುಂಡಿಗೆ ಕಟ್ಟ ಕಟ್ಟಿ ನೀರು ನಿಲ್ಲಿಸುವ ಕೆಲಸವನ್ನು ಸ್ವಯಂಸೇವಕರು ಪ್ರತಿ ವರ್ಷ ಮಾಡುತ್ತಿದ್ದಾರೆ.








## 2.15 ವಿಪತ್ತುವಾರು ತಜ್ಞರನ್ನು ಒಳಗೊಂಡಿದೆ ಶೌರ್ಯ ತಂಡ

ವಿಪತ್ತು ನಿರ್ವಹಣಾ ಸಮಿತಿಗಳಲ್ಲಿ ವಿವಿಧ ವಿಪತ್ತುಗಳ ನಿರ್ವಹಣೆಗೆ ಸಂಬಂಧಿಸಿದ ತಜ್ಞರು ಇದ್ದಾರೆ. ತಮ್ಮ ಗ್ರಾಮಗಳಲ್ಲಿ ತಾವು ಹೊಂದಿರುವ ಕೌಶಲ್ಯವನ್ನು ಬಳಸಿಕೊಂಡು ಆಕಸ್ಮಿಕವಾಗಿ ಘಟಿಸುವ ವಿಪತ್ತುಗಳಿಗೆ ಸ್ಪಂದಿಸುತ್ತಿದ್ದ ಸ್ವಯಂಸೇವಕರು ಶೌರ್ಯ ಸಮಿತಿಗೆ ಸೇರ್ಪಡೆಗೊಂಡ ನಂತರ ವೈಜ್ಞಾನಿಕ ತರಬೇತಿಗಳನ್ನು ಪಡೆದುಕೊಂಡು ತಮ್ಮ ಕೌಶಲವನ್ನು ವೃದ್ಧಿಸಿಕೊಂಡಿರುತ್ತಾರೆ. ಬೆಳ್ತಂಗಡಿ ತಾಲ್ಲೂಕು ವಿಪತ್ತು ನಿರ್ವಹಣಾ ಸಮಿತಿಗಳಲ್ಲಿ ಇರುವ ವಿಪತ್ತುವಾರು ತಜ್ಞರ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ವಿಶೇಷ ತಜ್ಞತೆ | ಒಟ್ಟು | ಕ್ರ. ಸಂ. | ವಿಶೇಷ ತಜ್ಞತೆ | ಒಟ್ಟು |
|---|---|---|---|---|---|
| 1 | ಈಜು ತಜ್ಞರು | 1217 | 9 | ವೆಲ್ಡಿಂಗ್ ವೃತ್ತಿಯವರು | 20 |
| 2 | ದೋಣಿ ಚಾಲಕರು | 189 | 10 | ಸಂಪನ್ಮೂಲ ವ್ಯಕ್ತಿಗಳು | 180 |
| 3 | ಗಾರೆ ಕೆಲಸದವರು | 2021 | 11 | ಮುಳುಗು ತಜ್ಞರು | 13 |
| 4 | ಮರ ಏರುವ ತಜ್ಞರು | 283 | 12 | ಬೆಂಕಿ ಅವಘಡ ನಿರ್ವಹಣೆ ತಜ್ಞರು | 328 |
| 5 | ಟೈಲರ್ ವೃತ್ತಿಯವರು | 9 | 13 | ರಸ್ತೆ ಅಪಘಾತ ತಜ್ಞರು | 418 |
| 6 | ಸೆಲೂನ್ ಶಾಪ್ ಹೊಂದಿರುವವರು | 15 | 14 | ಪ್ರಥಮ ಚಿಕಿತ್ಸೆ ತಜ್ಞರು | 43 |
| 7 | ಮೆಕ್ಯಾನಿಕ್ ತಜ್ಞರು | 52 | 15 | ಇಲೆಕ್ಟ್ರಿಶಿಯನ್ | 980 |
| 8 | ವಾಹನ ಚಾಲಕರು | 2496 | 16 | ಪೈಂಟರ್ | 146 |

## 2.16 ಪ್ರಗತಿಯ ಪಕ್ಷಿನೋಟ

| ಕ್ರ. ಸಂ. | ವಿಷಯ | ವರದಿ ವರ್ಷ | ಒಟ್ಟು |
|---|---|---|---|
| 1 | ಸಂಯೋಜಕರ ತರಬೇತಿ | 21 | 70 |
| 2 | ರಚಿಸಿದ ವಿಪತ್ತು ನಿರ್ವಹಣಾ ತಂಡ | 18 | 72 |
| 3 | ಸಂಯೋಜಕರ ಆಯ್ಕೆಯ ಸಮಾಲೋಚನೆ | 49 | 334 |
| 4 | ಸ್ವಯಂಸೇವಕರ ಆಯ್ಕೆಯ ಸಮಾಲೋಚನೆ ಸಭೆ | 402 | 1027 |
| 5 | ಸಂಯೋಜಕರ ಸಂಖ್ಯೆ | 206 | 571 |
| 6 | ಸ್ವಯಂಸೇವಕರ ಸಂಖ್ಯೆ | 2207 | 6592 |
| 7 | ಒಟ್ಟು ಸಂಯೋಜಕರು/ಸ್ವಯಂಸೇವಕರ ಸಂಖ್ಯೆ | 2413 | 7163 |
| 8 | ಸ್ವಯಂಸೇವಕರ ತರಬೇತಿ | 35 | 74 |
| 9 | ವಿಪತ್ತು ಕಾರ್ಯಾಚರಣೆಗಳು | 16,264 | 35,604 |
| 10 | ಸಾಮಾಜಿಕ ಸೇವೆ | 20,151 | 41,072 |
| 11 | ಒಟ್ಟು ಚಟುವಟಿಕೆಗಳು | 36,415 | 76,676 |
| 12 | ಒಟ್ಟು ವಿನಿಯೋಗಿಸಿದ ಮಾನವ ದಿನಗಳು | 1,82,075 | 3,83,380 |

## 2.17 ವರದಿ ಕ್ರೋಢೀಕರಣ ಮತ್ತು ಘಟಕಗಳಿಗೆ ಶ್ರೇಣಿ ನೀಡುವುದು

ತಾಲ್ಲೂಕು ಘಟಕಗಳು ನಿರ್ವಹಿಸಿದ ವಿಪತ್ತು ಸೇವೆ ಮತ್ತು ಸಾಮಾಜಿಕ ಸೇವಾ ಕಾರ್ಯಗಳಿಗೆ ಅಂಕಗಳನ್ನು ನೀಡಿ ಗುರುತಿಸುವ ಕೆಲಸ ಮಾಡಲಾಗುತ್ತಿದೆ. ಪ್ರತೀ ತಿಂಗಳ 21ನೇ ತಾರೀಕಿಗೆ ಘಟಕಗಳ ವರದಿಗಳನ್ನು ಸಂಯೋಜಕರು ಮಾಸಿಕ ವರದಿ ಪುಸ್ತಕದ ನಮೂನೆಯಲ್ಲಿ ದಾಖಲಿಸಿ ಮೇಲ್ವಿಚಾರಕರಿಗೆ ನೀಡುತ್ತಿದ್ದು ಮೇಲ್ವಿಚಾರಕರು ಪರಿಶೀಲಿಸಿ ಪ್ರತೀ ತಿಂಗಳ 22 ತಾರೀಕಿಗೆ ಯೋಜನಾಧಿಕಾರಿಯವರಿಗೆ ಸಲ್ಲಿಸುತ್ತಾರೆ. ಯೋಜನಾಧಿಕಾರಿಯವರು ಪ್ರತೀ ತಿಂಗಳ 25ನೇ ತಾರೀಕಿಗೆ ಆಯಾ ಪ್ರಾದೇಶಿಕ ಕಛೇರಿಗೆ ತಲುಪಿಸಿ ಪ್ರಾದೇಶಿಕ ಕಛೇರಿಯಿಂದ ಪ್ರತೀ ತಿಂಗಳ 28 ತಾರೀಕಿಗೆ ಜನಜಾಗೃತಿ ಪ್ರಾದೇಶಿಕ ವಿಭಾಗಕ್ಕೆ ಕಳುಹಿಸುವ ಕುರಿತು ಮಾಹಿತಿ ನೀಡಲಾಗಿದ್ದು, ವರದಿಗಳು ಸಮಯಕ್ಕೆ ಸರಿಯಾಗಿ ಬರುವಲ್ಲಿ ಪ್ರಯತ್ನಿಸಲಾಗುತ್ತಿದೆ. ಇದರ ಆಧಾರದ ಮೇಲೆ ಘಟಕಗಳ ಮೌಲ್ಯ ಮಾಪನವನ್ನು ಮಾಡಲಾಗುತ್ತಿದೆ. ಪ್ರತೀ ತಿಂಗಳಲ್ಲಿ ಘಟಕಗಳ ಸಾಧನೆಯನ್ನು ತಿಳಿಸಿ ಹೆಚ್ಚಿನ ಸೇವೆಗೆ ಆದ್ಯತೆ ನೀಡುತ್ತಾ ಬರಲಾಗಿದೆ. ಸ್ವಯಂಸೇವಕರು ನಿರ್ವಹಿಸಿದ ಕಾರ್ಯಚಟುವಟಿಕೆಗಳನ್ನು ಪೋಸ್ಟರ್ ಕಾರ್ಡ್ ಮೂಲಕ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಸಾರಗೊಳಿಸಲಾಗುತ್ತಿದೆ. 8000 ಕ್ಕೂ ಅಧಿಕ ಪೋಸ್ಟರ್‌ಗಳನ್ನು ತಯಾರಿಸಿದ್ದು ಸೇವಾ ಚಟುವಟಿಕೆಗಳ ದಾಖಲಾತಿ ನಿರ್ವಹಣೆ ಇದರಿಂದ ಸಾಧ್ಯವಾಗಿದೆ.

## 2.18 ಸ್ವಯಂಸೇವಕರ ಡೈರೆಕ್ಟರಿ


ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ವಿಪತ್ತು ನಿರ್ವಹಣಾ ಘಟಕಕ್ಕೆ ಸ್ವಯಂಸೇವಕರಾಗಿ ಆಯ್ಕೆಯಾದ ಸದಸ್ಯರ ವಿವರವನ್ನು ಸರ್ಕಾರದ ವಿವಿಧ ಇಲಾಖೆಗಳು, ಜಿಲ್ಲಾಧಿಕಾರಿಗಳ ಕಚೇರಿ, ಅಗ್ನಿಶಾಮಕದಳ, ಪೊಲೀಸ್ ಇಲಾಖೆ, ಗಣ್ಯರಿಗೆ ನೀಡುವ ಉದ್ದೇಶದಿಂದ ಡೈರೆಕ್ಟರಿ ರಚಿಸಲಾಗುವುದು. ಅದರಲ್ಲಿ ಸ್ವಯಂಸೇವಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಹೊಂದಿರುವ ವಿಶೇಷ ತಜ್ಞತೆ, ಸ್ವಯಂಸೇವಕರ ಭಾವಚಿತ್ರ ಮುಂತಾದ ವಿವರಗಳನ್ನು ಪ್ರಕಟಿಸಲಾಗುವುದು. ಜಿಲ್ಲೆ ಹಾಗೂ ತಾಲೂಕುವಾರು ಸಿಗುವ ಈ ಮಾಹಿತಿಯಿಂದಾಗಿ ಯಾವುದೇ ರೀತಿಯ ತೊಂದರೆಗೆ ಒಳಗಾದವರಿಗೆ ತಮ್ಮ ಹತ್ತಿರದ ವಿಪತ್ತು ಸ್ಪಂದನಾ ಸ್ವಯಂಸೇವಕರನ್ನು ಕೂಡಲೇ ಸಂಪರ್ಕಿಸಿ ಸಹಾಯ ಪಡೆಯಲು ಅನುಕೂಲವಾದಂತಾಗುತ್ತದೆ. ಪ್ರಸ್ತುತ ಮೂಡಿಗೆರೆ, ಕಳಸ, ಬೆಳ್ತಂಗಡಿ, ಗುರುವಾಯನಕರೆ ತಾಲೂಕಿನ ಡೈರಕ್ಟರಿಯನ್ನು ಬಿಡುಗಡೆ ಮಾಡಲಾಗಿದೆ. ಉಳಿದಂತೆ ತಯಾರಿ ನಡೆಯುತ್ತಿದೆ.

## 2.19 ಸ್ವಯಂಸೇವಕರಿಗೆ ಯೋಜನೆಯಿಂದ ಸ್ಪಂದನೆ

ಸೇವೆಯಲ್ಲಿ ತೊಡಗಿಕೊಳ್ಳುವ ಸ್ವಯಂಸೇವಕರು ಸ್ವತಃ ತೊಂದರೆಗೆ ಈಡಾದ ಸಂದರ್ಭ ಬಂದಲ್ಲಿ ಅವರಿಗೆ ಸಹಾಯಧನ ನೀಡುವ ಮೂಲಕ ಸ್ಪಂದನೆಯನ್ನು ಯೋಜನೆಯಿಂದ ಮಾಡಲಾಗಿದೆ. ಸೋಮವಾರಪೇಟೆ ತಾಲ್ಲೂಕಿನ ಕಲ್ಕಂದೂರು ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸಕ್ರೀಯ ಸ್ವಯಂಸೇವಕರಾದ ಶಿವಕುಮಾರ್ ರವರು ಬೈಕ್ ಅಪಘಾತದಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಚಿಕಿತ್ಸಾ ವೆಚ್ಚವನ್ನು ಭರಿಸಲು ಕಷ್ಟವಾಗಿದ್ದರಿಂದ ಇವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಒಂದು ಲಕ್ಷ ರೂಪಾಯಿ ಮಂಜೂರು ಮಾಡಲಾಗಿದೆ. ಸುಳ್ಯ ತಾಲ್ಲೂಕಿನ ಸುಬ್ರಹ್ಮಣ್ಯ ಘಟಕದ ಸ್ವಯಂಸೇವಕರಾದ ಕುಶಾಲಪ್ಪ ಇವರು ಕೆಲಸ ಮಾಡುವಾಗ ಮರ ಕತ್ತರಿಸುವ ಯಂತ್ರದ ಚೈನ್ ತಗಲು ಕಾಲಿಗೆ ಗಾಯವಾಗಿದ್ದು ವೈದ್ಯರು ಮೂರು ತಿಂಗಳು ವಿಶ್ರಾಂತಿ ಪಡೆದುಕೊಳ್ಳಲು ಸಲಹೆ ನೀಡಿದ್ದರಿಂದ ಕೆಲಸ ಮಾಡಲು ಅಶಕ್ತರಾದ ಇವರಿಗೆ ಯೋಜನೆಯಿಂದ ಮಾಶಾಸನ ರೂ. 3000 ಮಂಜೂರು ಮಾಡಿ ವಿತರಣೆ ಮಾಡಲಾಗಿದೆ. ಮೂಡಿಗೆರೆ ತಾಲ್ಲೂಕಿನ ಜಾವಳಿ ಘಟಕದ ಸ್ವಯಂಸೇವಕರಾದ ಸಂದೇಶ್ ರವರು ಆಕಸ್ಮಿಕವಾಗಿ ಮರಣ ಹೊಂದಿದ್ದು ಇವರ ಕುಟುಂಬಕ್ಕೆ ರೂ. 25,000 ನೀಡಲಾಗಿದೆ. ಸೇವೆಯಲ್ಲಿ ಸಕ್ರೀಯವಾಗಿ ತೊಡಗಿಕೊಳ್ಳುವ ಸ್ವಯಂಸೇವಕರು ಸ್ವತಃ ಸಮಸ್ಯೆಗೆ ಸಿಲುಕಿಕೊಂಡಾಗ ಯೋಜನೆಯಿಂದ ಸ್ಪಂದಿಸುವ ಕೆಲಸ ಮಾಡಲಾಗಿದ್ದು ಇದರಿಂದಾಗಿ ಸ್ವಯಂಸೇವಕರು ಬಹಳ ಉತ್ಸಾಹದಿಂದ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ.

## 2.20 ಸಾಧಕ ಸ್ವಯಂಸೇವಕರಿಗೆ ಉತ್ತೇಜನ

ವಿವಿಧ ಕ್ಷೇತ್ರಗಳಲ್ಲಿ ವೈಯಕ್ತಿಕ ಸಾಧನೆ ತೋರುವ ಸ್ವಯಂಸೇವಕರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡುವ ಕೆಲಸ ಮಾಡಲಾಗಿದೆ. ಸುಳ್ಯ ತಾಲ್ಲೂಕಿನ ಕಲ್ಮಡ್ಕ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ಆನಂದ್ ಕೆ. ಇವರು ರಾಷ್ಟ್ರ ಮಟ್ಟದ ರಿಲೇ ಓಟದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದು ಸಾಧನೆಯನ್ನು ಗುರುತಿಸಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ತಗಲುವ ಖರ್ಚಿಗಾಗಿ ಯೋಜನೆಯಿಂದ ರೂ.25,000 ಮಂಜೂರು ಮಾಡಲಾಗಿದೆ. ಕ್ರೀಡೆ, ಸಾಂಸ್ಕೃತಿಕ, ಭಜನೆ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಸ್ವಯಂಸೇವಕರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.






## 2.21 ಪತ್ರಿಕೆ ಮತ್ತು ಟಿ.ವಿ ವರದಿಗಾರರಾಗಿ ಆಯ್ಕೆಯಾದ ಸ್ವಯಂಸೇವಕರು

ವಿಪತ್ತು ನಿರ್ವಹಣಾ ಚಟುವಟಿಕೆಗಳ ವರದಿಯನ್ನು ಮಾಡುವ ಕುರಿತಂತೆ ಸ್ವಯಂಸೇವಕರಿಗೆ ತರಬೇತಿಯನ್ನು ನೀಡಲಾಗಿದ್ದು ಸಂಯೋಜಕರು ಬಹಳ ಉತ್ತಮವಾಗಿ ವರದಿಯನ್ನು ಮಾಡುತ್ತಿದ್ದಾರೆ. ಸಂಯೋಜಕರು ತಾವು ತಯಾರಿಸುತ್ತಿದ್ದ ವರದಿಯನ್ನು ಪತ್ರಿಕೆಗಳಿಗೆ ಸಹ ಕಳುಹಿಸಿಕೊಡುತ್ತಿದ್ದರು. ಸಂಯೋಜಕರ ವರದಿ ತಯಾರಿಸುವ ಕೌಶಲ್ಯವನ್ನು ಗಮನಿಸಿದ ಕೆಲವು ಪತ್ರಿಕೆಗಳು ಹಾಗೂ ಟಿ.ವಿ ಮಾಧ್ಯಮಗಳು ತಮ್ಮ ವರದಿಗಾರರನ್ನಾಗಿ ನೇಮಕ ಮಾಡಿಕೊಂಡಿರುತ್ತವೆ. ಮೂಡಿಗೆರೆ ತಾಲ್ಲೂಕಿನ ಸಂಯೋಜಕರಾದ ಪ್ರವೀಣ್ ಪೂಜಾರಿ ಇವರು ಪಬ್ಲಿಕ್ ಇಂಪ್ಯಾಕ್ಟ್ ಟಿ.ವಿ ಚಾನಲ್ ನ ವರದಿಗಾರರಾಗಿ ಹಾಗೂ ಸಂಯುಕ್ತ ಕರ್ನಾಟಕ ಪತ್ರಿಕೆಯ ವರದಿಗಾರರಾಗಿ ನೇಮಕಗೊಂಡಿರುತ್ತಾರೆ. ಬಣಕಲ್ ಘಟಕದ ಸ್ವಯಂಸೇವಕರಾದ ಪ್ರಕಾಶ್ ರವರು ಟಿ.ವಿ 6 ಸುದ್ದಿ ವಾಹಿನಿಯ ವರದಿಗಾರರಾಗಿ ನೇಮಕಗೊಂಡಿರುತ್ತಾರೆ. ಬೇಲೂರು ತಾಲ್ಲೂಕಿನ ಘಟಕಪ್ರತಿನಿಧಿ ಮಹೇಶ್ ಇವರು ಸ್ಥಳೀಯ ಪತ್ರಿಕೆಯನ್ನು ಆರಂಭಿಸಿರುತ್ತಾರೆ.

## 2.22 ಆಪದ್ ಮಿತ್ರ ತರಬೇತಿ ಪಡೆದ 62 ಸ್ವಯಂಸೇವಕರು

ಕೇಂದ್ರ ಸರ್ಕಾರದ ಕಾರ್ಯಕ್ರಮವಾದ ಆಪದ್ ಮಿತ್ರ ತರಬೇತಿ ಕಾರ್ಯಕ್ರಮದಲ್ಲಿ ವಿಪತ್ತು ನಿರ್ವಹಣಾ ಸ್ವಯಂಸೇವಕರು ಭಾಗವಹಿಸಿ ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ಬೆಳ್ತಂಗಡಿ, ಚಿಕ್ಕಮಗಳೂರು, ಕಾರವಾರ, ಅಂಕೋಲಾ, ಮೂಡಿಗೆರೆ ತಾಲ್ಲೂಕಿನ ಒಟ್ಟು 62 ಸ್ವಯಂಸೇವಕರು ಆಪದ್ ಮಿತ್ರ ತರಬೇತಿ ಪಡೆದಿರುತ್ತಾರೆ. 12 ದಿನಗಳ ಕಾಲ ಈ ತರಬೇತಿ ನಡೆದಿದ್ದು ಸ್ವಯಂಸೇವಕರಿಗೆ ಗುರುತು ಪತ್ರ ಮತ್ತು ಪ್ರಮಾಣಪತ್ರವನ್ನು ಸರ್ಕಾರದ ವತಿಯಿಂದ ನೀಡಿರುತ್ತಾರೆ.






## 2.23 ವಿಪತ್ತು ನಿರ್ವಹಣಾ ಪ್ರಾಧಿಕಾರದ ಭೇಟಿ

ಶೌರ್ಯ ಕಾರ್ಯಕ್ರಮವನ್ನು ಸರ್ಕಾರದ ಸಹಭಾಗಿತ್ವದಲ್ಲಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಸಲಹೆ ಪಡೆಯಲು ಮತ್ತು ಶೌರ್ಯ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧೀಕಾರವನ್ನು ಭೇಟಿ ಮಾಡಲಾಯಿತು. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ರಶ್ಮೀ ಮಹೇಶಿ ಇವರನ್ನು ಭೇಟಿ ಮಾಡಿ ಶೌರ್ಯ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ ಸರ್ಕಾರದ ಇಲಾಖೆಗಳ ನೆರವು ಕೋರಲಾಯಿತು. ವಿಪತ್ತು ನಿರ್ವಹಣಾ ಕೋಶದ ಸಹಾಯಕ ನಿರ್ದೇಶಕರಾದ ಶ್ರೀ ಸೋಮಶೇಖರ್, ಶ್ರೀ ಶ್ರೀನಿವಾಸ್ ರೆಡ್ಡಿ, ತಾಂತ್ರಿಕ ಅಧಿಕಾರಿ ಶ್ರೀ ಅಶೋಕ್ ಉಪಸ್ಥಿತರಿದ್ದರು. ಮುಂದಿನ ದಿನಗಳಲ್ಲಿ ಸರ್ಕಾರದ ಇಲಾಖೆ ಹಾಗೂ ಯೋಜನೆ ಜಂಟಿಯಾಗಿ ಸ್ವಯಂಸೇವಕರ ತರಬೇತಿಯನ್ನು ನಡೆಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಭರವಸೆಯನ್ನು ಅಧಿಕಾರಿಗಳು ನೀಡಿರುತ್ತಾರೆ.

## 2.24 ಮುಖ್ಯ ಮಂತ್ರಿಗಳ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅಗ್ನಿಶಾಮಕ ಮುಖ್ಯಸ್ಥರ ಕ್ಷೇತ್ರ ಭೇಟಿ

ಶೌರ್ಯ ಸ್ವಯಂಸೇವಕರ ಸಮಾವೇಶಕ್ಕಾಗಿ ಮುಖ್ಯಮಂತ್ರಿಗಳು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಆಗಮಿಸುವ ಕುರಿತು ಸಮಯ ನೀಡಿದ್ದು ಕಾರ್ಯಕ್ರಮ ನಡೆಯುವ ಸ್ಥಳ ಪರಿಶೀಲನೆ ಹಾಗೂ ತರಬೇತಿ ನಡೆಸುವ ಪೂರ್ವ ತಯಾರಿ ಕುರಿತಾಗಿ ಅಗ್ನಿಶಾಮಕ ಇಲಾಖೆಯ ಮಂಗಳೂರು ಪ್ರಾಂತ್ಯದ ಮುಖ್ಯ ಅಗ್ನಿಶಾಮಕ ಅಧಿಕಾರಿಗಳಾದ ಶ್ರೀ ಜಿ. ತಿಪ್ಪೇಸ್ವಾಮಿ, ಎಸ್.ಡಿ.ಆರ್.ಎಫ್‌ನ ಸಹಾಯಕ ಕಮೀಶನರ್ ಶ್ರೀ ಶರತ್ ಎಮ್. ಎ. ಹಾಗೂ ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಮಂಗಳೂರಿನ ಶ್ರೀ ಭರತ್ ಕುಮಾರ್ ಇವರು ಭೇಟಿ ನೀಡಿದರು. ಇದೇ ಸಂದರ್ಭದಲ್ಲಿ ಪೂಜ್ಯರನ್ನು, ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮುಖ್ಯ ನಿರ್ವಹಣಾಧಿಕಾರಿಯವರನ್ನು ಭೇಟಿ ಮಾಡಿ ಕಾರ್ಯಕ್ರಮದ ಪೂರ್ವ ಸಿದ್ಧತೆ ಕುರಿತು ಚರ್ಚೆ ನಡೆಸಿದ್ದರು. ಯೋಜನೆಯ ಮೂಲಕ ಅನುಷ್ಠಾನ ಮಾಡಲಾಗುತ್ತಿರುವ ಶೌರ್ಯ ಕಾರ್ಯಕ್ರಮದಿಂದ ಅನೇಕ ದುರಂತಗಳ ನಿರ್ವಹಣೆಗೆ ಸಹಕಾರಿಯಾಗಿದೆ ಎನ್ನುವ ಅಭಿಪ್ರಾಯವನ್ನು ಅಧಿಕಾರಿಗಳು ವ್ಯಕ್ತಪಡಿಸಿರುತ್ತಾರೆ.





## 2.25 ಪುಸ್ತಕ, ಮಾಹಿತಿ ಪತ್ರ ಮತ್ತು ತರಬೇತಿ ಕೈಪಿಡಿ:

ವಿಪತ್ತು ನಿರ್ವಹಣೆಯ ಕುರಿತಾದ ಸಮಗ್ರ ವಿವರಣೆಯುಳ್ಳ 'ಶೌರ್ಯ' ಆಪತ್ ಕಾಲದ ಆಪ್ತ ರಕ್ಷಕರು ಎನ್ನುವ ಪುಸ್ತಕವನ್ನು ರಚಿಸಲಾಗಿದೆ. ವಿಪತ್ತು ನಿರ್ವಹಣಾ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸ್ವಯಂಸೇವಕರಿಗೆ ಅರ್ಥೈಸಿಕೊಳ್ಳಲು ಅನುಕೂಲವಾಗುವಂತೆ ಪ್ರಾಕೃತಿಕ ದುರಂತಗಳು ಮತ್ತು ನಿರ್ವಹಣೆ ಎನ್ನುವ ಮಾಹಿತಿ ಕೈಪಿಡಿ ಹೊರತರಲಾಗಿದೆ.

ಸಂಯೋಜಕರಿಗೆ ಘಟಕಗಳ ನಿರ್ವಹಣೆಯ ಕುರಿತು ಮಾಹಿತಿಗಾಗಿ ಸಂಯೋಜಕರ ತರಬೇತಿ ಕೈಪಿಡಿ ರಚಿಸಲಾಗಿದೆ. ಜೀವ ರಕ್ಷಣಾ ಕೌಶಲ್ಯ ತರಬೇತಿಗೆ ಪೂರಕವಾಗಿ "ಜೀವ ರಕ್ಷಣಾ ಕೌಶಲ್ಯಗಳು' ಎನ್ನುವ ಮಾಹಿತಿ ಕೈಪಿಡಿಯನ್ನು ರಚಿಸಲಾಗಿದೆ. ಅಲ್ಲದೇ ವಿವಿಧ ವಿಪತ್ತು ನಿರ್ವಹಣಾ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿ ಪತ್ರಗಳನ್ನು ತಯಾರಿಸಲಾಗಿದೆ. ತರಬೇತಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಸಂಗ್ರಹಿಸಿದ್ದು ತರಬೇತಿಯ ಸಂದರ್ಭದಲ್ಲಿ ಸ್ವಯಂಸೇವಕರಿಗೆ ವಿತರಿಸಲಾಗಿದೆ.

## 2.26 ವಿಪತ್ತು ನಿರ್ವಹಣಾ ವಿಭಾಗದ ಕಾರ್ಯಕ್ರಮಗಳಿಗೆ ತಗಲಿದ ಖರ್ಚುವೆಚ್ಚಗಳ ವಿವರ

| ಕ್ರ ಸಂ. | ವಿಷಯ | ವರದಿ ವರ್ಷ | ಇದುವರೆಗೆ ಒಟ್ಟು |
|---|---|---|---|
| 1 | ಸಂಯೋಜಕರ ತರಬೇತಿ | 2,35,048.00 | 4,69,360.00 |
| 2 | ಸ್ವಯಂ ಸೇವಕರ ತರಬೇತಿ | 24,93,696.00 | 37,66,183.00 |
| 3 | ಸಂಯೋಜಕರ ಸಭೆ | 24,060.00 | 1,87,435.00 |
| 4 | ಸಮಿತಿಯ ವಿಶೇಷ ಸಭೆಗಳು | 1,10,689.00 | 1,10,689.00 |
| 5 | ವಿಪತ್ತು ಮತ್ತು ಸಾಮಾಜಿಕ ಸೇವಾಕಾರ್ಯಗಳಿಗೆ ಮಂಜೂರಾತಿ | 9,08,226.00 | 13,14,838.00 |
| 6 | ಸಮವಸ್ತ್ರ ಖರೀದಿ | – | 23,02,412.00 |
| 7 | ಕ್ಯಾಪ್ ಖರೀದಿ | – | 2,60,000.00 |
| 8 | ರಕ್ಷಣಾ ಪರಿಕರಗಳ ಖರ್ಚಿನ ವಿವರ | 33,27,818.00 | 85,86,264.00 |
| 9 | ಪುಸ್ತಕ ಪ್ರಮಾಣಪತ್ರ ಮುದ್ರಣ ಬಾಪ್ತು | 3,69,888.00 | 4,82,127.00 |
| 10 | ಇತರೇ ಮಂಜೂರಾತಿ( ಪಾದಯಾತ್ರೆ, ಗಿಡನಾಟಿ, ಮರಣ ಸಾಂತ್ವಾನ, ಮನೆ ರಚನೆ ಇತ್ಯಾದಿ) | 2,57,723.00 | 4,88,740.00 |
| 11 | ಆರೋಗ್ಯ ರಕ್ಷಾ | 9,07,936.00 | 9,07,936.00 |

## 2.27 ಸುತ್ತೋಲೆಗಳು

ವಿಪತ್ತು ನಿರ್ವಹಣಾ ಕಾರ್ಯಕ್ರಮ ಹಾಗೂ ಸಾಮಾಜಿಕ ಅರಣ್ಯೀಕರಣದ ಬಗ್ಗೆ ಕಾರ್ಯನಿರ್ವಾಹಕ ನಿರ್ದೇಶಕರ ಮೂಲಕ ಹಾಗೂ ವೇದಿಕೆಯ ಮೂಲಕ ಸುತ್ತೋಲೆಗಳನ್ನು ನೀಡಲಾಗಿದ್ದು, ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1 | 31/EDOO/2020-21 21.05.2020 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮ ಆರಂಭಿಸುವ ಕುರಿತು. |
| 2 | 95/EDOO/2020-21 08.08.2020 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಅನುಷ್ಠಾನದ ಕುರಿತು. |
| 3 | 209/EDOO/2020-21 29.03.2021 | ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಸಮಿತಿಯ ಘಟಕಗಳ ಸಲಕರಣೆ ಮತ್ತು ಪರಿಕರಗಳ ನಿರ್ವಹಣೆಯ ಕುರಿತು. |
| 4 | 36/EDOO/2021-22 15.06.2021 | ಯೋಜನೆಯ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದ ಅನುಷ್ಠಾನದ ಕುರಿತು. |
| 5 | 139/ EDOO/2021-22 21.03.2022 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಅನುಷ್ಠಾನದ ಕುರಿತು. |
| 6 | 16/EDOO/2022-23 25.05.2022 | ಯೋಜನೆಯ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದ ಅನುಷ್ಠಾನದ ಕುರಿತು. |